# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 742

ಸದಸ್ಯರ ಹೆಸರು : ಶ್ರೀ. ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ

ಉತ್ತರಿಸುವ ಸಚಿವರು : ತೋಟಗಾರಿಕೆ ಸಚಿವರು

ಉತ್ತರಿಸುವ ದಿನಾಂಕ : 17.12.2018

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ತೋಟಗಾರಿಕೆ ಇಲಾಖೆಯ ರೈತಪರ ಯೋಜನೆಗಳು ಸಹಾಯ-ಸವಲತ್ತುಗಳು ಸರಿಯಾದ ಪ್ರಚಾರವಿಲ್ಲದೇ ಗ್ರಾಮೀಣ ಭಾಗದ ರೈತರಿಗೆ ಮಾಹಿತಿ ಸಿಗದಿರುವ ಮತ್ತು ರೈತರು ಸಹಾಯ-ಸವಲತ್ತುಗಳನ್ನು ಪಡೆದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ: | ತೋಟಗಾರಿಕೆ ಇಲಾಖೆಯ ರೈತಪರ ಯೋಜನೆಗಳು ಸಹಾಯ-ಸವಲತ್ತುಗಳು ಸರಿಯಾದ ಪ್ರಚಾರವಿಲ್ಲದೇ ಗ್ರಾಮೀಣ ಭಾಗದ ರೈತರಿಗೆ ಮಾಹಿತಿ ಸಿಗದಿರುವ ಮತ್ತು ರೈತರು ಸಹಾಯ-ಸವಲತ್ತುಗಳನ್ನು ಪಡೆದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ |
| ಆ) | ಹಾಗಿದ್ದಲ್ಲಿ ತೋಟಗಾರಿಕಾ ಬೆಳೆಗಳಿಗೆ ಸರ್ಕಾರದಿಂದ ರೈತರಿಗೆ ಸಿಗುವ ಸಹಾಯ-ಸವಲತ್ತುಗಳು ಹಾಗೂ ವಿವಿಧ ಯೋಜನೆಗಳು ಹಾಗೂ ಸಹಾಯಧನಗಳು ಯಾವುವು: (ಇಲಾಖೆಯ ಯೋಜನೆಗಳ ವಿವರ ನೀಡುವುದು) | ತೋಟಗಾರಿಕಾ ಬೆಳೆಗಳಿಗೆ ಸರ್ಕಾರದಿಂದ ರೈತರಿಗೆ ಸಿಗುವ ಸಹಾಯ-ಸವಲತ್ತುಗಳು ಹಾಗೂ ವಿವಿಧ ಯೋಜನೆಗಳು ಹಾಗೂ ಸಹಾಯಧನಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ. |
| ಇ) | ತೋಟಗಾರಿಕಾ ಇಲಾಖೆಯಿಂದ ಬೆಳಗಾವಿ ಜಿಲ್ಲೆಗೆ ವಿವಿಧ ಯೋಜನೆಗಳಡಿ ಕಳೆದ 3 ವರ್ಷಗಳಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು: (ತಾಲ್ಲೂಕುವಾರು, ವರ್ಷವಾರು ಲೆಕ್ಕಶೀರ್ಷಿಕೆವಾರು ವಿವರ ನೀಡುವುದು) | ತೋಟಗಾರಿಕಾ ಇಲಾಖೆಯಿಂದ ಬೆಳಗಾವಿ ಜಿಲ್ಲೆಗೆ ವಿವಿಧ ಯೋಜನೆಗಳಡಿ ಕಳೆದ 3 ವರ್ಷಗಳಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನ, ತಾಲ್ಲೂಕುವಾರು, ವರ್ಷವಾರು ಲೆಕ್ಕಶೀರ್ಷಿಕೆವಾರು ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ. |

| | | |
|---|---|---|
| ಈ) | ಬೆಳಗಾವಿ ಜಿಲ್ಲೆಯಲ್ಲಿ ಸಹಾಯಧನ ಹಾಗೂ ವಿವಿಧ ಸವಲತ್ತು ಕೋರಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು; ಎಷ್ಟು ಮಂದಿಗೆ ಸವಲತ್ತು ಹಾಗೂ ಸಹಾಯಧನ ನೀಡಲಾಗಿದೆ; ನೀಡಲು ಬಾಕಿ ಇರುವ ಅರ್ಜಿಗಳೆಷ್ಟು: | ಬೆಳಗಾವಿ ಜಿಲ್ಲೆಯಲ್ಲಿ ಸಹಾಯಧನ ಹಾಗೂ ವಿವಿಧ ಸವಲತ್ತು ಕೋರಿ 5964 ಅರ್ಜಿಗಳು ಬಂದಿದ್ದು, ಇದರಲ್ಲಿ 3503 ಮಂದಿಗೆ ಸವಲತ್ತು ಹಾಗೂ ಸಹಾಯಧನ ನೀಡಲಾಗಿದೆ; ನೀಡಲು ಬಾಕಿ ಇರುವ ಅರ್ಜಿಗಳ ಸಂಖ್ಯೆ 2461. |
| ಉ) | ಫಲಾನುಭವಿಗಳ ಆಯ್ಕೆಗೆ ಇರುವ ಮಾನದಂಡಗಳೇನು; ಆಯ್ಕೆ ಸಮಿತಿ ಯಾವುದು; ಯಾವ ಆಧಾರದ ಮೇಲೆ ಆಯ್ಕೆ ಪಟ್ಟಿಯನ್ನು ಅಂತಿಮಗೊಳಿಸಲಾಗುತ್ತದೆ? | ಫಲಾನುಭವಿಗಳ ಆಯ್ಕೆಗೆ ಇರುವ ಮಾನದಂಡಗಳು, ಆಯ್ಕೆಸಮಿತಿ, ಆಯ್ಕೆಪಟ್ಟಿ ಅಂತಿಮಗೊಳಿಸುವಿಕೆ ವಿವರಗಳನ್ನು ಅನುಬಂಧ-3ರಲ್ಲಿ ನೀಡಲಾಗಿದೆ. |

ಸಂಖ್ಯೆ:ತೋಇ 431 ತೋಇವಿ 2018

(ಎಂ.ಸಿ.ಮನಗೂಳಿ)

ತೋಟಗಾರಿಕೆ ಸಚಿವರು

LCQ 742

# ಅನುಬಂಧ-1

## ತೋಟಗಾರಿಕಾ ಬೆಳೆಗಳಿಗೆ ಸರ್ಕಾರದಿಂದ ರೈತರಿಗೆ ಸಿಗುವ ಸಹಾಯ-ಸವಲತ್ತುಗಳು ಹಾಗೂ ವಿವಿಧ ಯೋಜನೆಗಳು ಹಾಗೂ ಸಹಾಯಧನಗಳ ವಿವರಗಳು

| ಕ್ರ. ಸಂ | ಯೋಜನೆಗಳು | ಕಾರ್ಯಕ್ರಮದ ವಿವರ | ಸಿಗುತ್ತಿರುವ ಸವಲತ್ತುಗಳು | ಶೇಕಡಾವಾರು ಸಹಾಯಧನ | |
|---|---|---|---|---|---|
| | | | | ಸಾಮಾನ್ಯ | ಪ.ಜಾ./ಪ.ಪಂ |
| I. | ಕೇಂದ್ರ ವಲಯ ಯೋಜನೆಗಳು | | | | |
| 1 | ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನಾ – ಸೂಕ್ಷ್ಮ ನೀರಾವರಿ ಯೋಜನೆ | - | ಹನಿ ನೀರಾವರಿ ಅಳವಡಿಕೆಗೆ ಗರಿಷ್ಠ 5 ಹೆಕ್ಟೇರ್ ಪ್ರದೇಶಕ್ಕೆ ಸಹಾಯಧನ ನೀಡಲಾಗುತ್ತಿದೆ. ಮೊದಲ 2 ಹೆಕ್ಟೇರ್ ಪ್ರದೇಶಕ್ಕೆ ಶೇ. 90 ರಷ್ಟು ಸಹಾಯಧನ ಮತ್ತು ನಂತರದ 3 ಹೆಕ್ಟೇರ್ ಪ್ರದೇಶಕ್ಕೆ ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಶೇಕಡಾವಾರು ಮಿತಿಯೊಳಗೆ ಸಹಾಯಧನ ನೀಡಲಾಗುತ್ತಿದೆ. | 90 | 90 |
| 2 | ರಾಷ್ಟ್ರೀಯ ತೋಟಗಾರಿಕೆ ಮಿಷನ್ | | | | |
| i . | ನರ್ಸರಿ ಸ್ಥಾಪನೆ | | | | |
| | a) | ಮಾದರಿ ಸಸ್ಯಾಗಾರ (4ಹೆ) ಸಾರ್ವಜನಿಕ ವಲಯ | ಶೇ.100ರಷ್ಟು ಸಹಾಯಧನ, ಪ್ರತಿ ಹೆಕ್ಟೇರ್‌ಗೆ ರೂ.25.00ಲಕ್ಷಗಳಂತೆ, ಗರಿಷ್ಠ 4ಹೆ ವರೆಗ ರೂ.100.00ಲಕ್ಷ/ಘಟಕಕ್ಕೆ ಸಹಾಯಧನ ನೀಡಲಾಗುತ್ತಿದೆ. | - | - |

| | | | | | |
|---|---|---|---|---|---|
| | b) | ಖಾಸಗಿ ವಲಯ | ಶೇ.40ರಷ್ಟು ಸಹಾಯಧನ, ಪ್ರತಿ ಹೆಕ್ಟೇರ್‌ಗೆ ರೂ.10.00ಲಕ್ಷಗಳಂತೆ, ಗರಿಷ್ಟ 4ಹೆ ವರೆಗೆ ರೂ.40.00ಲಕ್ಷ/ಘಟಕಕ್ಕೆ ಸಹಾಯಧನ ನೀಡಲಾಗುತ್ತಿದೆ. | 40 | 40 |
| | c) | ಸಣ್ಣ ಸಸ್ಯಾಗಾರ (4ಹೆ) ಸಾರ್ವಜನಿಕ ವಲಯ | ಶೇ.100ರಷ್ಟು ಸಹಾಯಧನ, ಪ್ರತಿ ಹೆಕ್ಟೇರ್‌ಗೆ ರೂ.15.00 ಲಕ್ಷಗಳು. | - | - |
| | d) | ಖಾಸಗಿ ವಲಯ | ಶೇ.50ರಷ್ಟು ಸಹಾಯಧನ, ಪ್ರತಿ ಹೆಕ್ಟೇರ್‌ಗೆ ರೂ.7.50 ಲಕ್ಷಗಳು. | 50 | 50 |
| ii. | **ನರ್ಸರಿಗಳ ಉನ್ನತೀಕರಣ** | | | | |
| | a) | ಸಾರ್ವಜನಿಕ ವಲಯ | ಶೇ.100ರಷ್ಟು ಸಹಾಯಧನ, ಗರಿಷ್ಟ 4ಹೆ ವರೆಗೆ ರೂ.10.00ಲಕ್ಷ/ಘಟಕಕ್ಕೆ ಸಹಾಯಧನ ನೀಡಲಾಗುತ್ತಿದೆ. | - | - |
| | b) | ನರ್ಸರಿಗಳ ಉನ್ನತೀಕರಣ-ಖಾಸಗಿ ವಲಯ | ಶೇ.50ರಷ್ಟು ಸಹಾಯಧನ, ಗರಿಷ್ಟ 4ಹೆ ವರೆಗೆ ರೂ.5.00ಲಕ್ಷ/ಘಟಕಕ್ಕೆ ಸಹಾಯಧನ ನೀಡಲಾಗುತ್ತಿದೆ. | 50 | 50 |
| iii. | **ಅಂಗಾಂಶ ಕೃಷಿ ಘಟಕಗಳ ಬಲವರ್ಧನೆ** | | | | |
| | a) | ಸಾರ್ವಜನಿಕ ವಲಯ | ಶೇ.100ರಂತೆ ಪ್ರತಿ ಘಟಕಕ್ಕೆ ಗರಿಷ್ಠ ರೂ.20.00ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. | - | - |
| | b) | ಖಾಸಗಿ ವಲಯ | ಶೇ.50ರಂತೆ ಪ್ರತಿ ಘಟಕಕ್ಕೆ ಗರಿಷ್ಠ ರೂ.10.00ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. | 50 | 50 |
| iv. | **ಹೊಸ ಅಂಗಾಂಶ ಕೃಷಿ ಘಟಕಗಳ ಸ್ಥಾಪನೆ** | | | | |
| | a) | ಸಾರ್ವಜನಿಕ ವಲಯ | ಶೇ.100ರಂತೆ ಪ್ರತಿ ಘಟಕಕ್ಕೆ ಗರಿಷ್ಟ ರೂ.250.00 ಲಕ್ಷಗಳ | - | - |

| | | | | | |
|---|---|---|---|---|---|
| | | | ಸಹಾಯಧನ ನೀಡಲಾಗುತ್ತಿದೆ. | | |
| | b) | ಖಾಸಗಿ ವಲಯ | ಶೇ.40ರಂತೆ ಪ್ರತಿ ಘಟಕಕ್ಕೆ ಗರಿಷ್ಠ ರೂ.100.00ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. | 40 | 40 |
| v. | **ತರಕಾರಿ ಬೀಜೋತ್ಪಾದನೆ** | | | | |
| | a) | ಮುಕ್ತ ಪರಾಗಸ್ಪರ್ಶ ಬೆಳೆಗಳು ಸಾರ್ವಜನಿಕ ವಲಯ | ಸಾರ್ವಜನಿಕ ವಲಯಕ್ಕೆ ಶೇ.100 ರಷ್ಟು ಪ್ರತಿ ಹೆಕ್ಟೇರ್‌ಗೆ ರೂ. 35,000/- ಗರಿಷ್ಟ 5ಹೆಕ್ಟೇರ್ ವರೆಗೆ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 100 | - |
| | | ಮುಕ್ತ ಪರಾಗಸ್ಪರ್ಶ ಬೆಳೆಗಳು (ಖಾಸಗಿ ವಲಯ) | ಖಾಸಗಿ ವಲಯಕ್ಕೆ ಶೇ.35ರಷ್ಟು ಪ್ರತಿ ಹೆಕ್ಟೇರ್‌ಗೆ ರೂ.12,250ರಂತೆಗರಿಷ್ಟ 5 ಹೆಕ್ಟೇರ್ ವರೆಗೆ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 35 | 90 |
| | b) | ಹೈಬ್ರಿಡ್ ಬೀಜಗಳು (ಸಾರ್ವಜನಿಕ ವಲಯ) | ಸಾರ್ವಜನಿಕ ವಲಯಕ್ಕೆ ಶೇ.100 ರಷ್ಟು ಪ್ರತಿ ಹೆಕ್ಟೇರ್‌ಗೆ ರೂ. 1.50 ಲಕ್ಷಗಳಂತೆ ಗರಿಷ್ಟ 5 ಹೆಕ್ಟೇರ್‌ವರೆಗೆ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 100 | - |

| | | | | |
|---|---|---|---|---|
| | ಹೈಬ್ರಿಡ್ ಬೀಜಗಳು(ಖಾಸಗಿ ವಲಯ) | ಪ್ರತಿ ಹೆಕ್ಟೇರ್‌ಗೆ ರೂ.0.525 ಲಕ್ಷಗಳಂತೆ ಗರಿಷ್ಠ 5 ಹೆಕ್ಟೇರ್ ವರೆಗೆ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 35 | 90 |
| vi. | ಪ್ರದೇಶ ವಿಸ್ತರಣೆ | ತೋಟಗಾರಿಕೆ ಬೆಳೆಗಳಾದ ಹಣ್ಣು, ತೋಟದ ಬೆಳೆಗಳ ಪ್ರದೇಶ ವಿಸ್ತರಣೆಗೆ ಪ್ರತಿ ಫಲಾನುಭವಿಗೆ 4 ಹೆಕ್ಟೇರ್ ಹಾಗೂ ಹೈಬ್ರೀಡ್ ತರಕಾರಿಗಳು ಹಾಗೂ ಹೂವಿನ ಬೆಳೆಗಳಿಗೆ 2 ಹೆಕ್ಟೇರ್‌ವರೆಗೆ ಮಿತಿಗೊಳಿಸಿ ಶೇ. 40 ರಿಂದ 90 ರಷ್ಟು ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 40 | 90 |
| Vii. | ತೋಟಗಾರಿಕಾ ಬೆಳೆಗಳ ಪುನಶ್ಚೇತನ | ತೋಟಗಾರಿಕಾ ಬೆಳೆಗಳ ಪುನಶ್ಚೇತನ ಕಾರ್ಯಕ್ರಮಕ್ಕೆ ಸಹಾಯಧನವನ್ನು ಗರಿಷ್ಠ ರೂ.0.20ಲಕ್ಷಗಳು/ ಹೆಕ್ಟೇರ್‌ನಂತೆ ಪ್ರತಿ ರೈತರಿಗೆ ಗರಿಷ್ಠ 2 ಹೆಕ್ಟೇರ್ ಪ್ರದೇಶಕ್ಕೆ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 50 | 90 |
| viii. | ನೀರು ಸಂಗ್ರಹಣಾ ಘಟಕ | | | |
| a) | ವೈಯಕ್ತಿಕ ಕೃಷಿ ಹೊಂಡ (20ಮೀ*20ಮೀ*3ಮೀ) | ವೈಯಕ್ತಿಕ ಕೃಷಿ ಹೊಂಡ ನಿರ್ಮಾಣಕ್ಕೆ ಸಹಾಯಧನವನ್ನು ಗರಿಷ್ಠ ರೂ.0.75 ಲಕ್ಷಗಳು/ಪ್ರತಿ ಘಟಕದಂತೆ | 50 | 90 |

| | | | | | |
|---|---|---|---|---|---|
| | | | ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | | |
| | b) | ಸಮುದಾಯ ಕೆರೆ | ಸಮುದಾಯ ಕೆರೆ ನಿರ್ಮಾಣಕ್ಕೆ ಶೇ.100ರ ದರದಲ್ಲಿ ಸಹಾಯಧನವನ್ನು ಗರಿಷ್ಠ ರೂ.4.00ಲಕ್ಷಗಳು/ಪ್ರತಿ ಘಟಕದಂತೆ ನೀಡಲಾಗುತ್ತಿದೆ. | 100 | 100 |
| ix. | ಸಂರಕ್ಷಿತ ಬೇಸಾಯ | | | | |
| | a) | ಪಾಲಿ ಹೌಸ್ ನಿರ್ಮಾಣ | ಪ್ರತಿ ಫಲಾನುಭವಿಗೆ ರೂ.772.00 ರಿಂದ ರೂ.1069/ಚದರ ಮೀಟರ್ ನಂತೆ ಗರಿಷ್ಠ 4000 ಚದರ ಮೀಟರ್ ವರೆಗೆ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 50 | 90 |
| | b) | ನೆರಳು ಪರದೆ ನಿರ್ಮಾಣ | ಪ್ರತಿ ಫಲಾನುಭವಿಗೆ ರೂ.384ಚದರ ಮೀಟರ್ ರಂತೆ ಗರಿಷ್ಠ 4000 ಚದರ ಮೀಟರ್ ವರೆಗೆ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 50 | 90 |
| | c) | ಪಕ್ಷಿ ನಿರೋಧಕ ಬಲೆ | ಪ್ರತಿ ಫಲಾನುಭವಿಗೆ ರೂ.10/- ಚದರ ಮೀಟರ್ ರಂತೆ ಗರಿಷ್ಠ | 50 | 90 |

| | | | | | |
|---|---|---|---|---|---|
| | | | 5000 ಚದರ ಮೀಟರ್ ವರೆಗೆ ರೂ.0.50 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | | |
| | d) | ತರಕಾರಿ ಬೆಳೆಯಲ್ಲಿ ಪ್ಲಾಸ್ಟಿಕ್ ಹೊದಿಕೆ. | ಪ್ಲಾಸ್ಟಿಕ್ ಹೊದಿಕೆಗೆ ಸಹಾಯಧನವನ್ನುಗರಿಷ್ಠ ರೂ.0.16ಲಕ್ಷಗಳು/ಹೆಕ್ಟೇರ್ ನಂತೆ, ಪ್ರತಿ ರೈತರಿಗೆ ಗರಿಷ್ಠ 2 ಹೆಕ್ಟೇರ್ ಪ್ರದೇಶಕ್ಕೆ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 50 | 90 |
| x. | **ಸಮಗ್ರ ಕೀಟ/ರೋಗ ನಿಯಂತ್ರಣ ಮತ್ತು ಸಮಗ್ರ ಪೋಷಕಾಂಶ ನಿರ್ವಹಣೆ** | | ಪ್ರತಿ ಫಲಾನುಭವಿಗೆ ರೂ.1200/ ಹೆಕ್ಟೇರ್‌ನಂತೆ ಗರಿಷ್ಠ 4ಹೆ ವರೆಗೆ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 30 | 90 |
| xi. | **ಜೇನು ಕೃಷಿ** | | | | |
| | a) | ಜೇನು ಪೆಟ್ಟಿಗೆ ಹಾಗೂ ಕುಟುಂಬ | ಪ್ರತಿ ಜೇನು ಪೆಟ್ಟಿಗೆ ಹಾಗೂ ಕುಟುಂಬದ ಪ್ಯಾಕೇಜ್‌ಗೆ ರೂ.1600/-ರಂತೆ, ಗರಿಷ್ಠ 50 ಕುಟುಂಬ/ಪೆಟ್ಟಿಗೆಗೆ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 40 | 90 |

| | | | | | |
|---|---|---|---|---|---|
| | b) | ಜೇನುತುಪ್ಪ ತೆಗೆಯುವ ಯಂತ್ರ | ಒಂದು ಘಟಕಕ್ಕೆ ರೂ.8000/-ರಂತೆ ಸಹಾಯಧನ ನೀಡಲಾಗುತ್ತಿದೆ. | 40 | 40 |
| xii. | ತೋಟಗಾರಿಕೆಯಲ್ಲಿಯಾಂತ್ರೀಕರಣ | | | | |
| | a) | ಟ್ರ್ಯಾಕ್ಟರ್<br>(20ಹೆಚ್.ಪಿ.ವರೆಗೆ) | ಸಾಮಾನ್ಯ ರೈತರಿಗೆ ಗರಿಷ್ಠ ರೂ.0.75ಲಕ್ಷಗಳು ಮತ್ತು ಪರಿಶಿಷ್ಠ ಜಾತಿ/ಪಂಗಡ/ಸಣ್ಣ/ಅತಿ ಸಣ್ಣ/ಮಹಿಳೆಯರಿಗೆ ಗರಿಷ್ಠ ರೂ.2.70 ಲಕ್ಷಗಳ ಸಹಾಯಧನವನ್ನು ಪ್ರತಿ ಘಟಕಕ್ಕೆ ನೀಡಲಾಗುತ್ತಿದೆ.<br>(ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 25 | 90 |
| | b) | ಪವರ್ ಟಿಲ್ಲರ್<br>(8ಹೆಚ್.ಪಿ.ಗಿಂತ ಕಡಿಮೆ) | ಸಾಮಾನ್ಯ ರೈತರಿಗೆ ಗರಿಷ್ಠ ರೂ.0.40ಲಕ್ಷಗಳು ಮತ್ತು ಪರಿಶಿಷ್ಠ ಜಾತಿ/ಪಂಗಡ/ಸಣ್ಣ/ಅತಿ ಸಣ್ಣ/ಮಹಿಳೆಯರಿಗೆ ಗರಿಷ್ಠ ರೂ.0.90ಲಕ್ಷಗಳ ಸಹಾಯಧನವನ್ನು ಪ್ರತಿ ಘಟಕಕ್ಕೆ ನೀಡಲಾಗುತ್ತಿದೆ.<br>(ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 40 | 90 |
| | c) | ಪವರ್ ಟಿಲ್ಲರ್<br>(8ಹೆಚ್.ಪಿ. ಮತ್ತು ಅಧಿಕ) | ಸಾಮಾನ್ಯ ರೈತರಿಗೆ ಗರಿಷ್ಠ ರೂ.0.60ಲಕ್ಷಗಳು ಮತ್ತು ಪರಿಶಿಷ್ಠ ಜಾತಿ/ಪಂಗಡ/ಸಣ್ಣ/ಅತಿಸಣ್ಣ/ಮಹಿಳೆಯರಿಗೆ ಗರಿಷ್ಠ ರೂ.1.35ಲಕ್ಷಗಳ ಸಹಾಯಧನವನ್ನು ಪ್ರತಿ ಘಟಕಕ್ಕೆ ನೀಡಲಾಗುತ್ತಿದೆ. | 40 | 90 |

| | | | | | |
|---|---|---|---|---|---|
| | | | (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | | |
| | d) | ಸ್ವಯಂ ಚಾಲಿತ ಯಂತ್ರಗಳು | ಸಾಮಾನ್ಯ ರೈತರಿಗೆ ಗರಿಷ್ಠ ರೂ.1.00ಲಕ್ಷಗಳು ಮತ್ತು ಪರಿಶಿಷ್ಠ ಜಾತಿ/ಪಂಗಡ/ಸಣ್ಣ/ಅತಿಸಣ್ಣ/ಮಹಿಳೆಯರಿಗೆ ಗರಿಷ್ಠ ರೂ.2.25ಲಕ್ಷಗಳ ಸಹಾಯಧನವನ್ನು ಪ್ರತಿ ಘಟಕಕ್ಕೆ ನೀಡಲಾಗುತ್ತಿದೆ.<br>(ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 40 | 90 |
| xiv. | **ಮಾನವ ಸಂಪನ್ಮೂಲ ಅಭಿವೃದ್ಧಿ** | | | | |
| | a) | ರೈತರಿಗೆ ತರಬೇತಿ | ರೈತರಿಗೆ ಒಳ ರಾಜ್ಯದಲ್ಲಿ ರೂ.1000/- ಮತ್ತು ಹೊರ ರಾಜ್ಯದಲ್ಲಿ ರೂ.1500/- ಪ್ರತಿ ದಿನಕ್ಕೆ ವೆಚ್ಚ ಭರಿಸಲಾಗುತ್ತಿದೆ. | 100 | 100 |
| xv. | **ಸಮಗ್ರ ಕೊಯ್ಲೋತ್ತರ ನಿರ್ವಹಣೆ** | | | | |
| | a) | ಪ್ಯಾಕ್‌ಹೌಸ್. | ನಿಗದಿತ ವಿನ್ಯಾಸದಲ್ಲಿ ನಿರ್ಮಿಸಿದ ಕನಿಷ್ಠ ಕನ್ಯಾಯ ಸೌಕರ್ಯಗಳನ್ನು ಹೊಂದಿರುವ 216ಘ.ಮೀ. ಅಳತೆಯ (9ಮಿ*6ಮಿ*4ಮಿ) ಪ್ಯಾಕ್‌ಹೌಸ್‌ನ ಘಟಕ ವೆಚ್ಚ ರೂ.4.00 ಲಕ್ಷಗಳಾಗಿದ್ದು, ಗರಿಷ್ಟ ರೂ.2.00 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ.<br>(ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ | 50 | 90 |

| | | | | |
|---|---|---|---|---|
| | | ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | | |
| b) | ಸಮಗ್ರ ಪ್ಯಾಕ್‌ಹೌಸ್ | ನಿಗದಿತ ವಿನ್ಯಾಸದಲ್ಲಿ ನಿರ್ಮಿಸಿದ ಕನಿಷ್ಠ ಕಡ್ಡಾಯ ಸೌಕರ್ಯಗಳನ್ನು ಹೊಂದಿರುವ 648ಚ.ಮೀ. ಅಳತೆಯ (9ಮೀ*18ಮೀ*4ಮೀ) ಪ್ಯಾಕ್‌ಹೌಸ್‌ನ ಘಟಕ ವೆಚ್ಚ ರೂ.50.00 ಲಕ್ಷಗಳಾಗಿದ್ದು, ಗರಿಷ್ಠ ರೂ.17.50 ಲಕ್ಷಗಳ ಸಹಾಯಧನವನ್ನು ಪ್ರತಿ ಘಟಕಕ್ಕೆ ನೀಡಲಾಗುತ್ತಿದೆ. | 35 | 35 |
| c) | ಶೀತಲ ಗೃಹ ನಿರ್ಮಾಣ | ಪ್ರತಿ ಮೆಟ್ರಿಕ್ ಟನ್‌ಗೆ ರೂ.2800.00ರಂತೆ ಗರಿಷ್ಠ 5000 ಮೆಟ್ರಿಕ್ ಟನ್‌ವರೆಗೆ ಸಹಾಯಧನ ನೀಡಲಾಗುತ್ತಿದೆ. (Credit Linked Backended Subsidy) | 35 | 35 |
| d) | ಶೀತಲ ವಾಹನ ಖರೀದಿ | ಪ್ರತಿ ಘಟಕಕ್ಕೆ ಗರಿಷ್ಠ ರೂ.9.10ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ.(Credit Linked Backended Subsidy) | 35 | 35 |
| e) | ಪ್ರಾಥಮಿಕ ಸಂಸ್ಕರಣೆ ಘಟಕಗಳು | ಪ್ರಾಥಮಿಕ ಸಂಸ್ಕರಣೆ ಘಟಕವನ್ನು ಸ್ಥಾಪಿಸಲು ಪ್ರತಿ ಘಟಕ ವೆಚ್ಚ ರೂ 25.00ಲಕ್ಷಗಳಾಗಿದ್ದು, Credit Linked Backended Subsidy ರೂಪದಲ್ಲಿ ಪ್ರತಿ ಘಟಕಕ್ಕೆ Project cost ಮೊತ್ತಕ್ಕೆ ಮಾರ್ಗಸೂಚಿಯನ್ವಯ ಶೇ. 40 ರಷ್ಟು ಗರಿಷ್ಠ ರೂ. 10.00ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 40 | 90 |

| | | | | |
|---|---|---|---|---|
| f) | ಹಣ್ಣು ಮಾಗಿಸುವ ಘಟಕ | ಪ್ರತಿ ಮೆಟ್ರಿಕ್ ಟನ್‌ಗೆ ರೂ.35,000.00ರಂತೆ ಗರಿಷ್ಠ 300 ಮೆಟ್ರಿಕ್ ಟನ್‌ವರೆಗೆ ಸಹಾಯಧನ ನೀಡಲಾಗುತ್ತಿದೆ. (Credit Linked Backended Subsidy) | 35 | 35 |
| g) | ಕಡಿಮೆ ವೆಚ್ಚದ ಈರುಳ್ಳಿ ಶೇಖರಣಾ ಘಟಕ (25ಮ.ಟನ್) | ಪ್ರತಿ ಘಟಕಕ್ಕೆ ಗರಿಷ್ಠ ರೂ.0.875 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 50 | 90 |
| h) | Cold Staorage Staging | Cold Staorage Staging ಸ್ಥಾಪಿಸಲು ಘಟಕ ವೆಚ್ಚ ರೂ 15.00ಲಕ್ಷಗಳಾಗಿದ್ದು, Credit Linked Backended Subsidy ರೂಪದಲ್ಲಿ ಪ್ರತಿ ಘಟಕಕ್ಕೆ Project cost ಮೊತ್ತಕ್ಕೆ ಮಾರ್ಗಸೂಚಿಯನ್ವಯ ಶೇ. 35 ರಷ್ಟು ಗರಿಷ್ಠ ರೂ. 5.25 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | 35 | 35 |
| i) | ಸರ್ಕಾರಿ ಅಥವಾ ಖಾಸಗಿ ಅಥವಾ ಸಹಕಾರಿ ಸಂಘಗಳ ಭಾಗದಲ್ಲಿ ತೋಟಗಾರಿಕಾ ಉತ್ಪಾದನೆಗೆ ಮಾರುಕಟ್ಟೆ ಮೂಲಸೌಕರ್ಯಗಳನ್ನು ಸ್ಥಾಪಿಸುವುದು | | | |

| | | | | | |
|---|---|---|---|---|---|
| | | ಅ) Terminal Markets | ಸರ್ಕಾರಿ ಅಥವಾ ಖಾಸಗಿ ಅಥವಾ ಸಹಕಾರಿ ಸಂಘಗಳ ಜಾಗದಲ್ಲಿ ತೋಟಗಾರಿಕಾ ಉತ್ಪಾದನೆಗೆ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ Terminal Markets ಸ್ಥಾಪಿಸಲು ಶೇ.25-40 ರಷ್ಟು ಸಹಾಯಧನ ನೀಡಲಾಗುತ್ತಿದೆ. ಘಟಕ ವೆಚ್ಚ ರೂ 150.00 ಕೋಟಿಗಳಾಗಿರುತ್ತದೆ. | 25-40 | |
| | | ಆ) ಸಗಟು ಮಾರುಕಟ್ಟೆ (Whole sale Market) | ಘಟಕ ವೆಚ್ಚ ರೂ 100.00 ಕೋಟಿಗಳಾಗಿರುತ್ತದೆ. ಸರ್ಕಾರಿ ಅಥವಾ ಖಾಸಗಿ ಅಥವಾ ಸಹಕಾರಿ ಸಂಘಗಳ ಜಾಗದಲ್ಲಿ ತೋಟಗಾರಿಕಾ ಉತ್ಪಾದನೆಗೆ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಸಗಟು ಮಾರುಕಟ್ಟೆ ಸ್ಥಾಪಿಸಲು ಬಂಡವಾಳ ವೆಚ್ಚವನ್ನಾಗಿ ಶೇ.25 ರಷ್ಟು ಸಾಮಾನ್ಯ ಪ್ರದೇಶಗಳಿಗೆ ಹಾಗೂ ಶೇ.33.33 ರಷ್ಟು ಬಂಡವಾಳ ವೆಚ್ಚವನ್ನಾಗಿ ನಿಗದಿತ ಮತ್ತು ಗುಡ್ಡಗಾಡು ಪ್ರದೇಶಗಳಿಗೆ ನೀಡಲಾಗುತ್ತಿದೆ. | 25-40 | |
| | j) | Solar Dehydration Unit | ಘಟಕ ವೆಚ್ಚ ಗರಿಷ್ಠ ರೂ.4.00 ಲಕ್ಷಗಳಾಗಿದ್ದು ಶೇ.50 ರಂತೆ ಪ್ರತಿ ಫಲಾನುಭವಿಗೆ ರೂ. 2.00 ಲಕ್ಷ ಸಹಾಯಧನ ನೀಡಲಾಗುತ್ತಿದೆ | 50 | 50 |
| 3 | **ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ** | | | | |
| | i | ತೋಟಗಾರಿಕೆ ಬೆಳೆಗಳ ನಿಖರ ಬೇಸಾಯ | ಸದರಿ ಯೋಜನೆಯಡಿ ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ರೈತರಿಗೆಸಹಾಯಧನವನ್ನು ಗರಿಷ್ಠ 5 ಎಕರೆವರೆಗೆ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ | - | 90 |

| | | | | |
|---|---|---|---|---|
| | | ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ). | | |
| ii | ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆ ಮತ್ತು ಮೌಲ್ಯವರ್ದನೆ | ಪೂರ್ಣ ಪ್ರಮಾಣದ ಸಂಸ್ಕರಣೆ ಮತ್ತು ಮೌಲ್ಯವರ್ದಿತ ಘಟಕಗಳ ಒಟ್ಟು ಯೋಜನಾ ವೆಚ್ಚದ ಶೇ.25 ರಂತೆ ಗರಿಷ್ಟ ರೂ.50.00 ಲಕ್ಷಗಳಿಗೆ ಮಿತಿಗೊಳಿಸಿ ಸಹಾಯಧನ ನೀಡಲಾಗುತ್ತಿದೆ. ಆದರೆ ಸಂಸ್ಕರಣಾ ಘಟಕಗಳ ಯೋಜನಾ ವೆಚ್ಚ ಕನಿಷ್ಟ ರೂ.50.00 ಲಕ್ಷಗಳಾಗಿರತಕ್ಕದ್ದು. | 50 | 90 |
| iii | ತೋಟಗಾರಿಕೆಯಲ್ಲಿ ಕೋಯ್ಲೋತ್ತರ ನಿರ್ವಹಣೆ ಚಟುವಟಿಕೆಗಳಿಗೆ ಪ್ರೋತ್ಸಾಹ ಕಾರ್ಯಕ್ರಮ. | | | |
| | ಅ) ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಘಟಕ | ಕನಿಷ್ಠ ಘಟಕ ವೆಚ್ಚ ರೂ 50.00 ಲಕ್ಷದಿಂದ ಗರಿಷ್ಠ ರೂ.200.00 ಲಕ್ಷಗಳನ್ನು ನಿಗಧಿಪಡಿಸಲಾಗಿದೆ. (Credit Linked Backended Subsidy @ Maximum Cost of Rs.50.00 Lakh/unit) | 25 | - |
| | ಆ) ಪ್ರಾಥಮಿಕ ಸಂಸ್ಕರಣಾ ಘಟಕ | ಪ್ರಾಥಮಿಕ ಸಂಸ್ಕರಣಾ ಘಟಕ ಸ್ಥಾಪಿಸಲು ಘಟಕ ವೆಚ್ಚ ಗರಿಷ್ಠ ರೂ.25.00 ಲಕ್ಷಗಳನ್ನು ನಿಗಧಿಪಡಿಸಲಾಗಿದೆ. Credit Linked Backended Subsidy,40% of Capital) | 40 | 90 |

| | | | | | |
|---|---|---|---|---|---|
| | | ಇ)ಪ್ಯಾಕ್ ಹೌಸ್ (9ಮೀ*6ಮೀ) | ಪ್ಯಾಕ್ ಹೌಸ್ ಸ್ಥಾಪಿಸಲು ಘಟಕ ವೆಚ್ಚ ಗರಿಷ್ಠ ರೂ.4.00 ಲಕ್ಷಗಳನ್ನು ನಿಗಧಿಪಡಿಸಲಾಗಿದೆ. | 50 | 90 |
| | iv) | ನೀರಿನ ಟ್ಯಾಂಕರ್ ಖರೀದಿಗೆ ಸಹಾಯಧನ | ನೀರಿನ ಟ್ಯಾಂಕರ್ ಖರೀದಿಗೆ ಸಹಾಯಧನ ಕಾರ್ಯಕ್ರಮದಡಿ ಪ್ರತೀ 4000 ಲೀ ಸಾಮರ್ಥ್ಯದ ಘಟಕಕ್ಕೆ 1.25 ಲಕ್ಷ ರೂಗಳನ್ನು ಹಾಗೂ ಪ್ರತೀ 5000 ಲೀ ಸಾಮರ್ಥ್ಯದ ಘಟಕಕ್ಕೆ 1.40 ಲಕ್ಷ ರೂಗಳನ್ನು, ನಿಗಧಿಪಡಿಸಲಾಗಿದೆ.(ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ) | 50 | 90 |
| 4 | ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತ ಬೇಸಾಯ | a) ತೆಂಗಿನ ತೋಟಗಳ ಪುನಃಶ್ಚೇತನ ಹಾಗೂ ಮರುನಾಟಿ ಮತ್ತು ನಿರ್ವಹಣೆ | ತೆಂಗಿನ ತೋಟಗಳ ಪುನಃಶ್ಚೇತನ ಹಾಗೂ ಮರುನಾಟಿ ಮತ್ತು ನಿರ್ವಹಣೆಗಾಗಿ ಒಂದು ಹೆಕ್ಟೇರ್ ಪ್ರದೇಶಕ್ಕೆ ತಗಲುವ ಘಟಕ ವೆಚ್ಚ ರೂ.1,10,000/- ಗಳಲ್ಲಿ ಪ್ರತಿ ಫಲಾನುಭವಿಗೆ ಕನಿಷ್ಠ 0.4 ಹೆಕ್ಟೇರ್ ನಿಂದ ಹರಿಷ್ಠ 1 ಹೆಕ್ಟೇರ್ ವರೆಗೆ ಮಿತಿಗೊಳಿಸಿ, ಪ್ರತಿ ಹೆಕ್ಟೇರ್ ಗೆ ರೂ.44,750/- ಗಳನ್ನು ಮೊದಲನೇ ವರ್ಷ ಹಾಗೂ ರೂ.8,750/- ಗಳನ್ನು ಎರಡನೇ ವರ್ಷದ ನಿರ್ವಹಣೆಗೆ ನೀಡಲಾಗುತ್ತಿದೆ. | 100 | 100 |
| | | b) ಹೊಸ ಪ್ರಾತ್ಯಕ್ಷತೆ ತಾಕುಗಳ ನಿರ್ಮಾಣ | ಹೊಸ ಪ್ರಾತ್ಯಕ್ಷತೆ ತಾಕುಗಳ ನಿರ್ಮಾಣ ಮತ್ತು ನಿರ್ವಹಣೆಗಾಗಿ ಒಂದು ಹೆಕ್ಟೇರ್ ಪ್ರದೇಶಕ್ಕೆ ತಗಲುವ ಘಟಕ ವೆಚ್ಚ ರೂ.35,000/- ಗಳನ್ನು ಪ್ರತೀ ವರ್ಷಕ್ಕೆ ರೂ,17,500/- ಗಳ ಸಹಾಯಧನವನ್ನು ಎರಡು ವಾರ್ಷಿಕ ಕಂತುಗಳಲ್ಲಿ | | |

| | | | | | |
|---|---|---|---|---|---|
| | | | ನೀಡುವುದು. ಪ್ರತಿ ಫಲಾನುಭವಿಗೆ ಕನಿಷ್ಠ 0.5 ಹೆಕ್ಟೇರ್ ನಿಂದ ಗರಿಷ್ಠ 1 ಹೆಕ್ಟೇರ್ ವರೆಗೆ ಮಿತಿಗೊಳಿಸಿ ಸಹಾಯಧನವನ್ನು ನೀಡಲಾಗುತ್ತಿದೆ. | | |
| 5 | **ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್** | | | | |
| | a) | ಮಾದರಿ ಸಸ್ಯಾಗಾರ(4ಹೆ)- ಸಾರ್ವಜನಿಕ ವಲಯ | ಶೇ.100 ರಷ್ಟು ಸಹಾಯಧನ, ಪ್ರತಿ ಘಟಕಕ್ಕೆ ಗರಿಷ್ಟ ರೂ.25.00 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. | 100 | 100 |
| | b) | ಖಾಸಗಿ ವಲಯ | ಶೇ.50ರಷ್ಟು ಸಹಾಯಧನ, ಪ್ರತಿ ಘಟಕಕ್ಕೆ ಗರಿಷ್ಟ ರೂ.12.50 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ . | – | – |
| **ಸಣ್ಣ ನರ್ಸರಿಗಳಿಗೆ ಸಹಾಯದನ (1 ಹೆಕ್ಟೇರ್)** | | | | | |
| | a) | ಸಣ್ಣ ಸಸ್ಯಾಗಾರ (1 ಹೆ)- ಸಾರ್ವಜನಿಕ ವಲಯ | ಶೇ.100 ರಷ್ಟು ಸಹಾಯಧನ, ಪ್ರತಿ ಘಟಕಕ್ಕೆ ಗರಿಷ್ಟ ರೂ.6.25 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. | – | – |
| | b) | ಖಾಸಗಿ ವಲಯ | ಶೇ.50ರಷ್ಟು ಸಹಾಯಧನ, ಪ್ರತಿ ಘಟಕಕ್ಕೆ ಗರಿಷ್ಟ ರೂ.3.125 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. | – | – |
| | ಚ) | ಔಷಧಿ ಬೆಳೆಗಳ ಪ್ರದೇಶ ವಿಸ್ತರಣೆ | ಔಷಧಿ ಬೆಳೆಗಳಾದ ಅಶ್ವಗಂಧ, ತುಳಸಿ, ಅಲೋ ವೆರಾ, ಹಿಪ್ಪಲಿ, ಮುಕೂನ, ಕೋಕಂ ವಿಸ್ತರಣೆಗೆ ಶೇ.30 ರಷ್ಟು ಸಹಾಯಧನ ನೀಡಲಾಗುತ್ತಿದೆ. ಪ್ರತಿ ಫಲಾನುಭವಿಗೆ 1 ಅಥವಾ ಅದಕ್ಕಿಂತ ಹೆಚ್ಚು ಬೆಳೆಗಳನ್ನು ಒಳಗೊಂಡಂತೆ ಗರಿಷ್ಟ 10 ಹೆಕ್ಟೇರ ವರೆಗೆ ಸಹಾಯಧನ ನೀಡಲಾಗುತ್ತಿದೆ. | 30 | 30 |

| | | | | |
|---|---|---|---|---|
| | | ಔಷಧಿ ಬೆಳೆಯಾದ ಆರೋಹಿ ವಿಸ್ತರಣೆಗೆ ಶೇ.50 ರಷ್ಟು ಸಹಾಯಧನ ನೀಡಲಾಗುತ್ತಿದೆ. ಪ್ರತಿ ಫಲಾನುಭವಿಗೆ 1 ಅಥವಾ ಅದಕ್ಕಿಂತ ಹೆಚ್ಚು ಬೆಳೆಗಳನ್ನು ಒಳಗೊಂಡಂತೆ ಗರಿಷ್ಟ 10 ಹೆಕ್ಟರ್ ವರೆಗೆ ಸಹಾಯಧನ ನೀಡಲಾಗುತ್ತಿದೆ. | - | - |
| | | ಔಷಧಿ ಬೆಳೆಗಳಾದ ರಕ್ತ ಚಂದನ, ಶ್ರೀಗಂಧ, ಅಗರ್ ವುಡ್ ಬೆಳೆಗಳ ಪ್ರದೇಶ ವಿಸ್ತರಣೆಗೆ ಶೇ.75 ರಷ್ಟು ಸಹಾಯಧನ ನೀಡಲಾಗುತ್ತಿದೆ. ಪ್ರತಿ ಫಲಾನುಭವಿಗೆ 1 ಅಥವಾ ಅದಕ್ಕಿಂತ ಹೆಚ್ಚು ಬೆಳೆಗಳನ್ನು ಒಳಗೊಂಡಂತೆ ಗರಿಷ್ಟ 10 ಹೆಕ್ಟರ್ ವರೆಗೆ ಸಹಾಯಧನ ನೀಡಲಾಗುತ್ತಿದೆ. | 75 | 75 |
| d) | ಒಣಗಿಸುವ ಶೆಡ್/ ಸಂಗ್ರಹಣಾ ಗೋಧಾಮು/ ಮಾರುಕಟ್ಟೆ ಮೂಲಭೂತ ಸೌಲಭ್ಯ ನಿರ್ಮಾಣ | ಯೋಜನಾ ವೆಚ್ಚದ ಶೇ.50 ರಷ್ಟು ಸಹಾಯಧನ | 50 | 50 |
| e) | ಸಾವಯವ ಕೃಷಿ ಮತ್ತು ಗುಂಪು ದೃಢೀಕರಣ | ಶೇ.50 ರಂತೆ ರೂ.10,000 ಪ್ರತೀ ಹೆಕ್ಟೇರ್ ಗೆ 3 ಕಂತುಗಳಲ್ಲಿ ಗರಿಷ್ಟ 4 ಹೆಕ್ಟೇರ್ ಗಳವರೆಗೆ. ಹಾಗೂ ಗುಂಪು ದೃಢೀಕರಣ ರೂ.5.00 ಲಕ್ಷ 50 ಹೆಕ್ಟೇರ್ ಗೆ | - | - |
| **6** | **ರಾಷ್ಟ್ರೀಯ ಎಣ್ಣೆಕಾಳು ಮತ್ತು ಎಣ್ಣೆತಾಳೆ ಅಭಿಯಾನ ಯೋಜನೆ** | | | |
| i | ಸಸಿಗಳಿಗೆಸಹಾಯಧನ:<br>ಉತ್ಕೃಷ್ಟಗುಣಮಟ್ಟದಸಸಿಗಳನ್ನುರೈತರಿಗೆಒದಗಿಸುವುದು | ಪ್ರತಿ ಹೆ. ಗರಿಷ್ಟ 12,000 ಗಳಂತೆ<br>(ಪ್ರತಿ ಸಸಿಗ ರೂ.81.60 ರಂತೆ), ನಾಟಿ ಮಾಡಿದ ಪೂರ್ಣ ವಿಸ್ತೀರ್ಣಕ್ಕೆಸಹಾಯಧನ ನೀಡಲಾಗುತ್ತಿದೆ. | 85 | 85 |

| | | | | | |
|---|---|---|---|---|---|
| | ii | ಬೇಸಾಯ ಸಹಾಯಧನ:<br>ಮೊದಲ 3 ವರ್ಷಸಸಿಗಳನ್ನು ಪೋಷಿಸಲು ರಾಸಯನಿಕಗೊಬ್ಬರ ವನ್ನು ಒದಗಿಸುವುದು. | ಗರಿಷ್ಟ 15ಹೆ ವರೆಗೆ ರಸಗೊಬ್ಬರದ ರೂಪದಲ್ಲಿ ಸಹಾಯಧನ ನೀಡಲಾಗುತ್ತಿದೆ.<br>ಮೊದಲನೇ ವರ್ಷ-ರೂ.5,000/-<br>ಎರಡನೇ ವರ್ಷ:- ರೂ.5,000/-<br>ಮೂರನೇ ವರ್ಷ:- ರೂ.5,000/-<br>ನಾಲ್ಕನೇ ವರ್ಷ:- ರೂ.5,000/- | 50 | 50 |
| **II.** | **ರಾಜ್ಯವಲಯ ಯೋಜನೆಗಳು** | | | | |
| **7** | **ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ** | | | | |
| | i) | ಆಯ್ದ ತೋಟಗಾರಿಕೆ ಬೆಳೆಗಳ ಪ್ರದೇಶ ಅಭಿವೃದ್ಧಿ ಹಾಗೂ ಎರಡನೇ ಮತ್ತು ಮೂರನೇ ವರ್ಷದ ನಿರ್ವಹಣೆ | ಸಣ್ಣ, ಅತೀ ಸಣ್ಣ ಮತ್ತು ಸಾಮಾನ್ಯ ರೈತರಿಗೆ ಶೇ. 50 ರಷ್ಟು ಸಹಾಯಧನ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ರೈತರಿಗೆ ಒಟ್ಟು ಘಟಕದ ಶೇ.90ರಷ್ಟು ಸಹಾಯಧನ ನೀಡಲಾಗುತ್ತಿದೆ. | 50 | 90 |
| | ii) | ನೀರು ಸಂಗ್ರಹಣಾ ಸ್ಥಾವರ | ಪ್ರತಿ ಘಟಕಕ್ಕೆ ಗರಿಷ್ಟರೂ.75,000/- ರಷ್ಟು ಸಹಾಯಧನನೀಡಲಾಗುತ್ತಿದೆ. | 50 | 50 |
| | iii) | ಪ್ಯಾಕ್ ಹೌಸ್ ಘಟಕಕ್ಕೆ ಸಹಾಯಧನ | ಪ್ಯಾಕ್ ಹೌಸ್ ಘಟಕ ಸ್ಥಾಪಿಸಲು ಗರಿಷ್ಠ ಘಟಕ ವೆಚ್ಚ ರೂ.4.00 ಲಕ್ಷಗಳಾಗಿದ್ದು, ಸಾಮಾನ್ಯ ವರ್ಗದ ರೈತರಿಗೆಶೇ.50 ರಂತೆ ರೂ.2.00 ಲಕ್ಷ ಸಹಾಯಧನ ಹಾಗೂ | 50 | 90 |

| | | | | |
|---|---|---|---|---|
| | | ಪರಿಶಿಷ್ಟ ಜಾತಿ/ಪಂಗಡಗಳ ರೈತರಿಗೆ ಶೇ.90 ರಂತೆ ರೂ.3.60 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. | | |
| iv) | ಪ್ಲಾಸ್ಟಿಕ್ ಕ್ರೇಟ್ಸ್ | ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಆಯ್ಕೆಯಾದ ಎಲ್ಲಾ ವರ್ಗದ ಫಲಾನುಭವಿಗಳಿಗೆ ಪ್ಲಾಸ್ಟಿಕ್ ಕ್ರೇಟ್ (15 ರಿಂದ 20 ಕೆ.ಜಿ ಸಾಮರ್ಥ್ಯವುಳ್ಳ) ಖರೀದಿಗಾಗಿ ಶೇ.50 ರಂತೆ ಗರಿಷ್ಠ ರೂ.150.00 ಪ್ರತಿ ಕ್ರೇಟ್ಸ್ ಗೆ ಸಹಾಯಧನ ನೀಡಲಾಗುತ್ತಿದೆ. | 50 | 50 |
| v) | ಆಲೂಗಡ್ಡೆ ಬೆಳೆಗೆ ವಿಶೇಷ ಪ್ಯಾಕೇಜ್ | ಆಲೂಗಡ್ಡೆ ಬೆಳೆ ಬೆಳೆದಂತಹ ರೈತರಿಗೆ ಜೈವಿಕ ಗೊಬ್ಬರ, ಸಸ್ಯ ಸಂರಕ್ಷಣಾ ಔಷಧಿ ಮತ್ತು ಬೆಳೆ ವಿಮೆಗಾಗಿ ಪ್ರತಿ ಹೆಕ್ಟೇರ್ ಗೆ ರೂ.5000.00 ದಂತೆಪ್ರತಿ ಫಲಾನುಭವಿಗೆ ಗರಿಷ್ಟ 2 ಹೆಕ್ಟೇರ್ ವರೆಗೆ ರೂ.10,000 ಗಳನ್ನು ನೀಡಲಾಗುತ್ತಿದೆ. | - | - |
| vi) | ದೃಢೀಕೃತ ಬಿತ್ತನೆ ಆಲೂಗೆಡ್ಡೆ ಬೀಜ ಖರೀದಿಗಾಗಿ ಸಹಾಯಧನ | ಪ್ರತಿ ಫಲಾನುಭವಿಗೆ ಪ್ರತಿ ಕಿಲೋ ಗ್ರಾಂ. ಗೆ ಗರಿಷ್ಟ ರೂ.11.72 ರಂತೆ 2 ಹೆಕ್ಟೇರ್ ಪ್ರದೇಶಕ್ಕೆ ಮಿತಿಗೊಳಿಸಿ ಗರಿಷ್ಠ 3 ಟನ್ ವರೆಗೆ ಸಹಾಯಧನನೀಡಲಾಗುತ್ತಿದೆ. | 50 | 50 |
| iv) | ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆ | ಗರಿಷ್ಠ ರೂ.10.00 ಲಕ್ಷಗಳಿಗೆ ಮಿತಿಗೊಳಿಸಿ ಸಹಾಯಧನನೀಡಲಾಗುತ್ತಿದೆ | 50 | - |
| v) | ಕೈತೋಟ ಮತ್ತು ತಾರಸಿ ತೋಟಗಳ ಅಭಿವೃದ್ಧಿಗೆ ಉತ್ತೇಜನ<br>ಅ) ಕೈತೋಟ ತರಬೇತಿ ಮತ್ತು ಕಿಟ್ ವಿತರಣೆ | ಪ್ರತಿ ಘಟಕಕ್ಕೆ ಗರಿಷ್ಠ ರೂ.1.00 ಲಕ್ಷಗಳವರೆಗೆ ಸಹಾಯಧನ ನೀಡಲಾಗುತ್ತಿದೆ.<br>ಪ್ರತಿ ಘಟಕಕ್ಕೆ ಗರಿಷ್ಠ ರೂ.2.25 ಲಕ್ಷಗಳವರೆಗೆ ಸಹಾಯಧನ | 100<br>100 | 100<br>100 |

| | | | | |
|---|---|---|---|---|
| | ಆ) ತಾರಸಿ ತೋಟದ ತರಬೇತಿ ಮತ್ತು ಕಿಟ್ ವಿತರಣೆ | ನೀಡಲಾಗುತ್ತಿದೆ. | | |
| vi) | ರೈತ ಉತ್ಪಾದಕರ ಸಂಸ್ಥೆಗಳಿಗೆ (FPO) ಸಹಾಯಧನ | ರಾಜ್ಯ ಸರ್ಕಾರದ ಕಾರ್ಯಕ್ರಮದಡಿ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕೆ ಶೇ.90 ರಂತೆ ಪ್ರತಿ ರೈತ ಉತ್ಪಾದಕರ ಸಂಸ್ಥೆಗೆ ಗರಿಷ್ಠ ರೂ.1.00 ಕೋಟಿಗಳ ಸಹಾಯಧನ. ಪ್ರತಿ ರೈತ ಉತ್ಪಾದಕ ಸಂಸ್ಥೆಗೆ ವ್ಯವಹಾರಿಕ ಬಂಡವಾಳವಾಗಿ (ಆವರ್ತನ ನಿಧಿ ರೂಪದಲ್ಲಿ) ರೂ.25.00 ಲಕ್ಷಗಳ ನೆರವು. | - | - |
| vii | ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ (PPP-IHD) | ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ (PPP-IHD) ಯೋಜನೆಯಡಿ ರೈತರಿಗೆ ಬಿತ್ತನೆ ಹಂತದಿಂದ ಮಾರುಕಟ್ಟೆ ಹಂತದವರೆಗೂ ನೆರವನ್ನು ಒದಗಿಸಲಾಗುತ್ತಿದೆ. ಅಲ್ಲದೇ, ಕೃಷಿ ವಿಜ್ಞಾನ ಕೇಂದ್ರ ಮತ್ತುರೈತ ಉತ್ಪಾದಕ ಸಂಘಗಳ ಸಹಭಾಗಿತ್ವದಲ್ಲಿ ರೈತರಿಗೆ ವಿಸ್ತರಣೆ ಸೇವೆಯನ್ನು ಒದಗಿಸಲಾಗುತ್ತಿದೆ. | - | - |
| viii | ಗೇರು ಅಭಿವೃದ್ಧಿ | ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿಪ್ರತಿ ಘಟಕಕ್ಕೆ ಒಟ್ಟು ರೂ. 45077/- ರಂತೆ ಹಾಗೂ ಮೊದಲನೆ ಮತ್ತು ಎರಡನೇ ವರ್ಷದ ನಿರ್ವಹಣೆಗೆ ಪ್ರತಿ ವರ್ಷಕ್ಕೆ ರೂ.21908/- ರಂತೆ ನಿಗಧಿಪಡಿಸಲಾಗಿದೆ. | 50 | 90 |
| viiii | ನೀರಿನ ಟ್ಯಾಂಕರ್ ಖರೀದಿಗೆ ಸಹಾಯಧನ | ನೀರಿನ ಟ್ಯಾಂಕರ್ ಖರೀದಿಗೆ ಸಹಾಯಧನ ಕಾರ್ಯಕ್ರಮದಡಿ ಪ್ರತೀ 4000 ಲೀ ಸಾಮರ್ಥ್ಯದ ಘಟಕಕ್ಕೆ 1.25 ಲಕ್ಷ ರೂಗಳನ್ನು ಹಾಗೂ ಪ್ರತೀ 5000 ಲೀ ಸಾಮರ್ಥ್ಯದ | 50 | 90 |

| | | | | | |
|---|---|---|---|---|---|
| | | | ಘಟಕಕ್ಕೆ 1.40 ಲಕ್ಷ ರೂಗಳನ್ನು ನಿಗಧಿಪಡಿಸಲಾಗಿದೆ. | | |
| 8 | ಹೂ ಕೃಷಿಗೆ ಉತ್ತೇಜನ | | | | |
| | i. | ಹಸಿರು ಮನೆಯಲ್ಲಿ ಹಳೆಯ ಮತ್ತು ಅನುತ್ಪಾದಕ ಹೂವಿನ ಗಿಡಗಳನ್ನು ತೆಗೆಯುವುದು ಮತ್ತು ಹೊಸ ಗಿಡಗಳನ್ನು ನೆಡಲು ಸಹಾಯಧನ | ಘಟಕ ವೆಚ್ಚದ ಶೇ.50 ರಂತೆ ಅಥವಾ ಪ್ರತಿ ಚದರ ಮೀಟರ್ ಗೆ ರೂ.50.00 ರಂತೆ ಗರಿಷ್ಠ 1 ಹೆಕ್ಟೇರ್‌ವರೆಗೆ (10,000 ಚ.ಮೀ) ಗರಿಷ್ಠ ರೂ.5.00 ಲಕ್ಷಗಳಿಗೆ ಸಹಾಯಧನ ಮೀರದಂತೆ ನೀಡಲಾಗುತ್ತಿದೆ. | 50 | 50 |
| | ii. | ಹಸಿರು ಮನೆಗಳ polythene sheet ಗಳ ಬದಲಾವಣೆಗೆ ಸಹಾಯಧನ | ಘಟಕ ವೆಚ್ಚದ ಶೇ.50 ರಂತೆ ಅಥವಾ ಪ್ರತಿ ಚದರ ಮೀಟರ್ ಗೆ ರೂ.30.00 ರಂತೆ ಗರಿಷ್ಠ 1 ಹೆಕ್ಟೇರ್‌ವರೆಗೆ (10,000 ಚ.ಮೀ) ಗರಿಷ್ಠ ರೂ.3.00 ಲಕ್ಷಗಳಿಗೆ ಸಹಾಯಧನ ಮೀರದಂತೆ ನೀಡಲಾಗುತ್ತಿದೆ. | 50 | 50 |
| 9 | **ತೋಟಗಾರಿಕೆ ಬೆಳೆಗಳ ರೋಗ ಮತ್ತು ಕೀಟಗಳ ಸಮಗ್ರ ನಿಯಂತ್ರಣ** | | ತೋಟಗಾರಿಕೆ ಬೆಳೆಗಳಿಗೆ ತಗಲುವ ರೋಗ ಮತ್ತು ಕೀಟಗಳ ನಿಯಂತ್ರಣಕ್ಕಾಗಿ ಸಸ್ಯ ಸಂರಕ್ಷಣಾ ಔಷಧಿಗಳನ್ನು ಖರೀದಿಸಿದ ರೈತರಿಗೆ ಪ್ರತಿ ಹೆಕ್ಟೇರಿಗೆ ತಗಲುವ ವೆಚ್ಚದಂತೆ ಶೇ.50 ರಂತೆ ಗರಿಷ್ಠ 2 ಹೆಕ್ಟೇರ್ ವರೆಗೆ ರೂ.7500.00 ಗಳ ಸಹಾಯಧನ ನೀಡಲಾಗುತ್ತಿದೆ. | 75 | 90 |
| 10 | **ಉತ್ಪಾದನಾ ಸುಧಾರಣಾ ಕಾರ್ಯಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತ ಬೇಸಾಯ (ರಾಜ್ಯವಲಯ)** | | | | |
| | a | ತೆಂಗು ಬೆಳೆಗೆ ತಗುಲುವ ಕೀಟ ಮತ್ತು ರೋಗಗಳ ಸಮಗ್ರ ನಿರ್ವಹಣೆ ಕಾರ್ಯಕ್ರಮ | ತೆಂಗು ಬೆಳೆಗೆ ತಗುಲುವ ಕೀಟ ಮತ್ತು ರೋಗಗಳ ನಿಯಂತ್ರಣಕ್ಕೆ ಕೀಟ ಮತ್ತು ರೋಗಗಳಿಗೆ ಅನುಗುಣವಾಗಿ ಒಟ್ಟು ಘಟಕ ವೆಚ್ಚದ ಶೇ.75 ರಂತೆ ಸಸ್ಯ ಸಂರಕ್ಷಣ ಔಷಧಿಗಳನ್ನು / ಪರಿಕರಗಳನ್ನು ಖರೀದಿಸಿದ ರೈತರಿಗೆ ಪ್ರತಿ | 75 | 75 |

| | | | | | |
|---|---|---|---|---|---|
| | | | ಹೆಕ್ಟೇರ್ ಗೆ ಗರಿಷ್ಠ ರೂ.5,250.00 ರಂತೆಗರಿಷ್ಠ 2 ಹೆಕ್ಟೇರ್ ವರೆಗೆ ಮಿತಿಗೊಳಿಸಿ ಸಹಾಯಧನ ನೀಡಲಾಗುತ್ತಿದೆ. | | |
| | b | ತೆಂಗಿನ ತೋಟಗಳ ಪ್ರದೇಶ ವಿಸ್ತರಣೆ (ತೆಂಗು ಅಭಿವೃದ್ಧಿ ಮಂಡಳಿ ಅನುಷ್ಠಾನಗೊಳಿಸುವ ಪ್ರದೇಶಕ್ಕೆ ಅನುಗುಣವಾಗಿ ರಾಜ್ಯದ ಪಾಲು) | 2018-19 ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ಶೇ.50 ರಂತೆ ಸಂಕರಣ ತಳಿಗೆ ರೂ.13500.00 ಮತ್ತು ಗಿಡ್ಡ ತಳಿಗೆ ರೂ.15000.00 ಹಾಗೂ ಎತ್ತರದ ತಳಿಗಳಿಗೆ ರೂ.13000.00 ದಂತೆ ಪ್ರತಿ ಫಲಾನುಭವಿಗೆ ಗರಿಷ್ಟ 4 ಹೆಕ್ಟೇರ್ ಗಳ ವರೆಗೆ ಒಂದೇ ಕಂತಿನಲ್ಲಿ ಸಹಾಯಧನವನ್ನು ನೀಡಲಾಗುತ್ತಿದೆ. | 50 | 50 |
| | c | ಮಂಡ್ಯ ಜಿಲ್ಲೆಯ ಕೃಷ್ಣರಾಜಸಾಗರ ತೋಟಗಾರಿಕೆ ಕ್ಷೇತ್ರದಲ್ಲಿ TXD/ DXT ಹೈಬ್ರಿಡ್ ತೆಂಗಿನ ಸಸಿಗಳ ಉತ್ಪಾದನೆ | 2018-19 ನೇ ಸಾಲಿಗೆ ಸುಮಾರು 70000 ಸಂಖ್ಯೆಯTXD / DXT ಹೈಬ್ರಿಡ್ ಬೀಜದ ಕಾಯಿಗಳ ಬಿತ್ತನೆಗಾಗಿ ಶೇ.50 ರಂತೆ ರಾಜ್ಯಪಾಲಿನ ಅನುದಾನ ರೂ.10.50 ಲಕ್ಷಗಳನ್ನು ರಾಜ್ಯ ವಲಯದ ತೆಂಗುಬೆಳೆ ಅಭಿವೃದ್ಧಿ ಯೋಜನೆಯಡಿ ಲಭ್ಯವಿರುವ ಅನುದಾನವನ್ನು ಬಳಸಿಕೊಂಡು ಉಳಿದ ಶೇ.50 ರಷ್ಟು ಅನುದಾನವನ್ನು KSHDA ವತಿಯಿಂದ ವೆಚ್ಚ ಭರಿಸಲು ಕ್ರಮ ವಹಿಸಲಾಗುತ್ತಿದೆ. | - | - |
| | d | ನೀರಾ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ | | | |
| | | ಅ) ನೀರಾ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ | ನೀರಾ ಸಂಸ್ಕರಣಾ ಘಟಕ ಸ್ಥಾಪಿಸಲು ಒಟ್ಟು ಘಟಕ ವೆಚ್ಚದ ಶೇ.50 ರಂತೆ ಗರಿಷ್ಠ ರೂ.100.00 ಲಕ್ಷಗಳಿಗೆ ಮೀರದಂತೆ ಸಹಾಯಧನ ನೀಡುವುದು. | 50 | 50 |
| | | ಆ) ನೀರಾ ತಂತ್ರಜ್ಞರಿಗೆ ತರಬೇತಿ | ತೆಂಗು ಉತ್ಪಾದಕರ ಕಂಪನಿ ಅಥವಾ ತೋಟಗಾರಿಕೆ ವೃತ್ತ | - | - |

| | | | | | |
|---|---|---|---|---|---|
| | | | ಉತ್ಪಾದಕರ ಸಂಸ್ಥೆಯ ಸದಸ್ಯರುಗಳಿಗೆ ಹಾಗೂ ಇತರೆ ಆಸಕ್ತ ರೈತರಿಗೆ ತೆಂಗು ಅಭಿವೃದ್ಧಿ ಮಂಡಳಿಯ ಸಹಯೋಗದೊಂದಿಗೆ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುತ್ತಿದೆ. | | |
| | | | | | |
| 11 | ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ | | | | |
| | a) | ಆಸಕ್ತ ಫಲಾನುಭವಿಗಳಿಗೆ ಜೇನು ಪೆಟ್ಟಿಗೆ, ಜೇನು ಕುಟುಂಬಗಳ ಹಾಗೂ ಸ್ಟ್ಯಾಂಡ್ ಗಳ ಖರೀದಿಗಾಗಿ ಸಹಾಯಧನ | ಪ್ರತಿ ಜೇನು ಪೆಟ್ಟಿಗೆ, ಜೇನು ಕುಟುಂಬಗಳ ಹಾಗೂ ಸ್ಟ್ಯಾಂಡ್ ಗಳ ಖರೀದಿಗಾಗಿಶೇ.40 ರಂತೆ ಗರಿಷ್ಟ ರೂ.1,800/-ಗಳಂತೆ (ಗರಿಷ್ಟ 4 ಪೆಟ್ಟಿಗೆ ಹಾಗೂ ಕುಟುಂಬಕ್ಕೆ) ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ರೈತರಿಗೆ ಶೇ.90ರಂತೆ ಗರಿಷ್ಟ ರೂ.4050/ ಗಳಂತೆ ಸಹಾಯಧನನೀಡಲಾಗುತ್ತಿದೆ. | 40 | 90 |
| | b) | ಜೇನು ಸಾಕಾಣೆ ಆಸಕ್ತರಿಗೆ ತರಬೇತಿ | ಪ್ರತಿ ಫಲಾನುಭವಿಗೆ 400 ರಂತೆ ಪ್ರತಿ ತಂಡಕ್ಕೆ 30 ಜನರಂತೆ 2 ದಿನಗಳ ಕಾಲ ತರಬೇತಿ ನೀಡಲಾಗುತ್ತಿದೆ. | - | - |
| | c) | ಮಧುವನ ಜೇನು ಸಾಕಾಣೆ ಆಸಕ್ತರಿಗೆ ಖಾಸಗಿ ಮಧುವನ ಸ್ಥಾಪನೆಗೆ ಸಹಾಯಧನ | ಪ್ರತಿ ಫಲಾನುಭವಿಗೆ ಶೇ.50 ರಂತೆ ರೂ.50000/- ಸಹಾಯಧನ ನೀಡಲಾಗುತ್ತಿದೆ. | 50 | 50 |
| 12 | ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ (ಸುಜಲಾ-III) | | | | |
| | | ಉತ್ಪಾದಕತೆ ಹೆಚ್ಚಿಸಲು ವಿಸ್ತರಣೆ ಮತ್ತು ಪ್ರಾತ್ಯಕ್ಷತೆ | | | |
| | i) | ಬಹುವಾರ್ಷಿಕ ಬೆಳೆಗಳ ಪ್ರಾತ್ಯಕ್ಷತೆ | ಪ್ರತಿ ಹೆಕ್ಟೇರ್‌ಗೆ ವಿವಿಧ ಹಣ್ಣಿನ ಬೆಳೆಗಳಿಗೆ ಅನುಗುಣವಾಗಿ ರೂ.70,000/- ವರೆಗೆ ರೈತರ ತೋಟದಲ್ಲಿ | 100% | 100% |

| | | | | |
|---|---|---|---|---|
| | | ಪ್ರಾತ್ಯಕ್ಷತೆಯನ್ನು ಸ್ಥಾಪಿಸಲು ಅನುದಾನ ನಿಗದಿಪಡಿಸಲಾಗಿದೆ. | | |
| ii) | ವಾರ್ಷಿಕ ಬೆಳೆಗಳ ಪ್ರಾತ್ಯಕ್ಷತೆ (ತರಕಾರಿಗಳು) | ವಿವಿಧ ತರಕಾರಿ ಬೆಳೆಗಳಿಗೆ ಅನುಗುಣವಾಗಿ ಪ್ರತಿ ಹೆಕ್ಟೇರ್‌ಗೆ ರೂ.30,000/- ರಂತೆ ರೈತರ ತೋಟದಲ್ಲಿ ಪ್ರಾತ್ಯಕ್ಷತೆಯನ್ನು ಸ್ಥಾಪಿಸಲು ಅನುದಾನ ನಿಗದಿಪಡಿಸಲಾಗಿದೆ. | 100% | 100% |
| iii) | ರೈತರಿಗೆ ತರಬೇತಿ | ಪ್ರತಿ ತರಬೇತಿಗೆ ರೂ.12,500/- ಅನುದಾನ ನಿಗದಿಪಡಿಸಿದ್ದು, 50 ರೈತರಿಗೆ ತಂತ್ರಜ್ಞಾನ ಅಳವಡಿಕೆ ಬಗ್ಗೆ ಒಂದು ದಿನದ ತರಬೇತಿ ನೀಡಲಾಗುತ್ತಿದೆ. | 100% | 100% |
| iv) | ರೈತರಿಗೆ ಪ್ರವಾಸ | ರೂ.1.00 ಲಕ್ಷ ವೆಚ್ಚದಲ್ಲಿ 3 ದಿವಸಗಳ ಅವಧಿಗೆ 50 ಜನ ರೈತರಿಗೆ ರಾಜ್ಯದ ಜಲಾನಯನ ಪ್ರದೇಶಗಳಿಗೆ ಪ್ರವಾಸ ಕೈಗೊಳ್ಳಲಾಗುತ್ತಿದೆ. | 100% | 100% |
| v) | ಕ್ಷೇತ್ರೋತ್ಸವ | ರೈತರ ತೋಟದಲ್ಲಿ ಅಳವಡಿಕೆಯಾದ ತಂತ್ರಜ್ಞಾನದ ಪ್ರಚಾರಕ್ಕಾಗಿ ರೂ.20,000/- ವೆಚ್ಚದಲ್ಲಿ 100 ರೈತರಿಗೆ ಒಂದು ದಿವಸದ ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಗುತ್ತಿದೆ. | 100% | 100% |
| | ತೋಟಗಾರಿಕೆ ರೈತರ ಮಣ್ಣು ಮತ್ತು ಬೆಳೆ ನಿರ್ವಹಣೆ | | | |
| i) | ರೈತರ ಜಮೀನುಗಳ ಬದುಗಳಲ್ಲಿ ಕಂದಕಗಳ ನಿರ್ಮಾಣ(TCB) | ದಾವಣಗೆರೆ ಜಿಲ್ಲೆಯಲ್ಲಿ ಈ ಕಾರ್ಯಕ್ರಮ ಅನುಷ್ಠಾನ ಮಾಡುತ್ತಿದ್ದು, ರೈತರ ಜಮೀನಿನ ಬದುಗಳಲ್ಲಿ 2.4 ಮೀ ಅಗಲ 0.45 ಮೀ ಎತ್ತರದ ಕಂದಕಗಳನ್ನು ನೀರು ಸಂಗ್ರಹಣೆ | 100% | 100% |

| | | | | |
|---|---|---|---|---|
| | | ಮತ್ತು ಇಂಗುವಿಕೆಗಾಗಿ ನಿರ್ಮಿಸಿಕೊಡಲಾಗುತ್ತಿದೆ. | | |
| ii) | ಸಮಸ್ಯಾತ್ಮಕ ಮಣ್ಣುಗಳ ಉಪಚಾರ | ಗದಗ ಜಿಲ್ಲೆಯಲ್ಲಿ ಈ ಕಾರ್ಯಕ್ರಮ ಅನುಷ್ಠಾನ ಮಾಡುತ್ತಿದ್ದು, ರೈತರ ಜಮೀನಿನ ಸಮಸ್ಯಾತ್ಮಕ ಮಣ್ಣುಗಳನ್ನು ಸರಿಪಡಿಸಲು ಪ್ರತಿ ಹೆಕ್ಟೇರ್‌ಗೆ ರೂ. 3,250.00 ರ ವೆಚ್ಚ ಭರಿಸಿ<br>1.ಜಿಪ್ಸಂ-5 ಕ್ವಿಂಟಲ್<br>2.ಜಿಂಕ್-12.5 ಕೇಜಿ<br>3.ಬೋರಾನ್-2.5 ಕೆ.ಜಿ ಪೋಷಕಾಂಶಗಳನ್ನು ಪೂರೈಕೆ ಮಾಡಲಾಗುತ್ತಿದೆ. | 100% | 100% |
| ಸಿ) | ಕೊಯ್ಲೋತ್ತರ ನಿರ್ವಹಣೆ | | 100% | 100% |
| i) | ರೈತ ಉತ್ಪಾದಕ ಸಂಸ್ಥೆಗೆ ನೆರವು(FPO) | ಹಣ್ಣು ಮಾಗುವಿಕೆ ಘಟಕ ಸ್ಥಾಪನೆಗೆ ಒಂದಕ್ಕೆ ರೂ. 50.00 ಲಕ್ಷದ ಆರ್ಥಿಕ ನೆರವು ಕಲ್ಪಿಸಲಾಗುತ್ತಿದೆ. | 100% | |
| ಡಿ) | ತೋಟಗಾರಿಕೆ ರೈತರ ಮಾರುಕಟ್ಟೆ ಸಾಮರ್ಥ್ಯ ಹೆಚ್ಚಿಸುವುದು | | | |
| i) | ರೈತ ಉತ್ಪಾದಕ ಸಂಸ್ಥೆಗೆ ನೆರವು(FPO) | FPO ಸದಸ್ಯರ ತೋಟದ ಉತ್ಪನ್ನಗಳನ್ನು ಮಾರಟಕ್ಕೆ ಉತ್ತೇಜಿಸಲು IIHR ನಿರ್ಮಿತ ಪ್ರತಿ ಮೊಬೈಲ್ ವೆಂಡಿಂಗ್ ವ್ಯಾನ್ ಖರೀದಿಸಲು ರೂ. 11.00 ಲಕ್ಷದ ಆರ್ಥಿಕ ನೆರವು ಕಲ್ಪಿಸಲಾಗುತ್ತಿದೆ. | 100% | |
| | | | | |
| 13 | ಕೃಷಿಭಾಗ್ಯ ಯೋಜನೆ | | | |

| | | | | | |
|---|---|---|---|---|---|
| | i | ಪಾಲಿಮನೆ ಘಟಕ | ಪ್ರತಿ ಘಟಕಕ್ಕೆ ಗರಿಷ್ಟ ರೂ.38.87 ಲಕ್ಷಗಳನ್ನು ಪಾಲಿ ಮನೆ ನಿರ್ಮಾಣ, ಮೋಟಾರ್ ಅಳವಡಿಕೆ ಹಾಗೂ ಅಧಿಕ ಮೌಲ್ಯದ ಬೆಳೆ ಉತ್ಪಾದನೆಗೆ ಸಹಾಯಧನ ನೀಡಲಾಗುತ್ತಿದೆ. | 50 | 90 |
| | ii | ನೆರಳು ಪರದೆ ಘಟಕ | ಪ್ರತಿ ಘಟಕಕ್ಕೆ ಗರಿಷ್ಠ ರೂ.20.96 ಲಕ್ಷಗಳನ್ನು ನೆರಳು ಪರದೆ ನಿರ್ಮಾಣ, ಹಾಗೂ ಅಧಿಕ ಮೌಲ್ಯದ ಬೆಳೆ ಉತ್ಪಾದನೆಗೆ ಸಹಾಯಧನ ನೀಡಲಾಗುತ್ತಿದೆ. | 50 | 90 |
| | iii | ಕೃಷಿ ಹೊಂಡ ಘಟಕ | ಪ್ರತಿ ಘಟಕಕ್ಕೆ ಗರಿಷ್ಠ ರೂ.1.55 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. | 50 | 90 |
| **III.** | **ಜಿಲ್ಲಾವಲಯ ಯೋಜನೆಗಳು** | | | | |
| 15 | ಹನಿ ನೀರಾವರಿಗಾಗಿ ಕೇಂದ್ರವಲಯ ಯೋಜನೆ | | ಹನಿ ನೀರಾವರಿ ನೀರಾವರಿ ಅಳವಡಿಕೆಗೆ ಗರಿಷ್ಠ 5 ಹೆಕ್ಟೇರ್ ಪ್ರದೇಶಕ್ಕೆ ಸಹಾಯಧನ ನೀಡಲಾಗುವುದು. ಮೊದಲು 2 ಹೆಕ್ಟೇರ್ ಪ್ರದೇಶಕ್ಕೆ ಶೇ. 90 ರಷ್ಟು ಸಹಾಯಧನ, ಮತ್ತು ನಂತರದ 3 ಹೆಕ್ಟೇರ್ ಪ್ರದೇಶಕ್ಕೆ ಶೇ. 50 ರಷ್ಟು ಸಹಾಯಧನ ನೀಡಲಾಗುತ್ತಿದೆ. | 90 | 90 |
| 16 | ಶೀತಲ ಗೃಹಗಳ ಸಹಾಯಧನ ಯೋಜನೆ | | ಶೀತಲ ಗೃಹಗಳು ಬಳಸುವ ಪ್ರತಿ ಯೂನಿಟ್ ವಿದ್ಯುಚ್ಛಕ್ತಿಗೆ ರೂ.1.00ರಂತೆ ಸಹಾಯಧನ ನೀಡಲಾಗುತ್ತಿದೆ. | - | - |

| | | | | |
|---|---|---|---|---|
| 17 | ರೈತರಿಗೆ ಸಹಾಯ | • [illegible] ಮತ್ತು ಇತರೆ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳ ಕಸಿ/ ಸಸಿಗಳನ್ನು ರೈತ ಫಲಾನುಭವಿಗಳಿಗೆ ಗರಿಷ್ಟ ರೂ.1,000.00 ಪ್ರತಿ ಎಕರೆಗೆ ಸಹಾಯಧನ ನೀಡಲಾಗುತ್ತಿದೆ. | 100 | 100 |
| | | • ತೋಟಗಾರಿಕೆ ಬೆಳೆಗಳಿಗೆ ತಗಲುವ ಕೀಟ/ರೋಗ ಬಾಧೆಯನ್ನು ನಿವಾರಿಸಲು ಉಪಯೋಗಿಸುವ ಸಸ್ಯ ಸಂರಕ್ಷಣಾ ಔಷಧಿಗಳಿಗೆ ಶೇ.50ರಂತೆ ಗರಿಷ್ಟ ರೂ.2,000.00 ರಂತೆ ಪ್ರತಿ ಹೆಕ್ಟೇರ್‌ಗೆ ಸಹಾಯಧನ ನೀಡಲಾಗುತ್ತಿದೆ. | 50 | 50 |
| 18 | ರೈತರಿಗೆ ತರಬೇತಿ | • ಸುಧಾರಿತ ಬೇಸಾಯ, ಆಧುನಿಕ ತಂತ್ರಜ್ಞಾನದ ಬಗ್ಗೆ ಅರಿವು ಮೂಡಿಸುವುದು, ರೈತರಲ್ಲಿ ಸ್ಪರ್ಧಾತ್ಮಕ ಮನೋಭಾವನೆಯನ್ನು ಪ್ರೋತ್ಸಾಹಿಸಿ ಆತ್ಮ ವಿಶ್ವಾಸ ಹೆಚ್ಚಿಸುವುದು ಮತ್ತು ಆರ್ಥಿಕತೆ ಬಗ್ಗೆ ಸದೃಢ ಗೊಳಿಸುವುದು.<br>• ಹಣ್ಣು / ತರಕಾರಿ ಇತ್ಯಾದಿಗಳನ್ನು ಕಡಿಮೆ ಬೆಲೆಯಲ್ಲಿ ದೊರೆಯುವ ಸಮಯದಲ್ಲಿ ಗೃಹ ಬಳಕೆಗೆ ಬಳಸಿ-ಕೊಳ್ಳಲು ಕಡಿಮೆ ವೆಚ್ಚದ ಶೇಖರಣೆ ಮತ್ತು ಸಂಸ್ಕರಣೆ ತಂತ್ರಜ್ಞಾನವನ್ನು ಬಳಸಿ ಸಂಸ್ಕರಿಸಿದ ಉತ್ಪನ್ನಗಳನ್ನು ತಯಾರಿಸುವ ಸಲುವಾಗಿ ಮಹಿಳೆಯರಿಗೆ ತರಬೇತಿ ನೀಡುವುದು. | 100 | 100 |

| | | | | | |
|---|---|---|---|---|---|
| | | | • ರೈತರಿಗೆ ತರಬೇತಿ ನೀಡಲು ಒಂದು ಅಥವಾ ಎರಡು ದಿನಗಳ ತರಬೇತಿಯನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಪ್ರತಿ ರೈತರಿಗೆ ಒಂದು ದಿನದ ಅವಧಿಗೆ ರೂ.400/-ರಂತೆ ವೆಚ್ಚ ಭರಿಸಲಾಗುತ್ತಿದೆ. | | |
| 19 | ರಾಷ್ಟ್ರೀಯ ಎಣ್ಣೆಕಾಳು ಮತ್ತು ಎಣ್ಣೆತಾಳೆ ಅಭಿಯಾನ ಯೋಜನೆ– ಜಿಲ್ಲಾವಲಯ | | | | |
| | i | ಡೀಸಲ್ / ಎಲೆಕ್ಟ್ರಿಕಲ್ ಪಂಪ್ ಸೆಟ್ ಕೊಳ್ಳಲು ಸಹಾಯಧನ;<br>ವಿದ್ಯುಚ್ಛಕ್ತಿ ಅಭಾವದ ಪ್ರದೇಶಗಳಲ್ಲಿ ನೀರುಣಿಸಲು | ಶೇ.50 ರಂತೆ ಪ್ರತಿ ಘಟಕಕ್ಕೆ ಗರಿಷ್ಟ ರೂ.15,000/- ಸಹಾಯಧನ ನೀಡಲಾಗುತ್ತಿದೆ. | 50 | 50 |
| | ii | ಕೊಳವೆ ಬಾವಿ | ಪ್ರತಿ ರೈತರಿಗೆ / ಘಟಕಕ್ಕೆ ಶೇ.50 ರಂತೆ ಗರಿಷ್ಟ ರೂ.50,000/- ಸಹಾಯಧನನೀಡಲಾಗುತ್ತಿದೆ. | 50 | 50 |
| | iii | ತಾಳೆ ತಾಕಿನಲ್ಲಿ ಅಂತರ ಬೆಳೆಗೆ ಸಹಾಯಧನ; | ಪ್ರತಿ ಹೆಕ್ಟೇರಿಗೆ ಶೇ.50 ರಂತೆ ಗರಿಷ್ಟ ರೂ.5,000/- ಸಹಾಯಧನ ನೀಡಲಾಗುತ್ತಿದೆ. | 50 | 50 |
| | vii | ತಾಳೆಹಣ್ಣು ಸಂರಕ್ಷಣಾ ತಂತಿ ಜಾಲರಿ | ಪ್ರತಿ ಘಟಕಕ್ಕೆ ಶೇ.50 ರಂತೆ ಗರಿಷ್ಟ ರೂ.15,000/- ಸಹಾಯಧನನೀಡಲಾಗುತ್ತಿದೆ. | 50 | 50 |
| | ix | ಮೋಟಾರ್ ಚಾಲಿತ ತಾಳೆಹಣ್ಣು ಕಟಾವು ಉಪಕರಣ | ಪ್ರತಿ ಘಟಕಕ್ಕೆ ಶೇ.50 ರಂತೆ ಗರಿಷ್ಟರೂ.3,000/- ಸಹಾಯಧನನೀಡಲಾಗುತ್ತಿದೆ. | 50 | 50 |
| 20 | ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ (D-05) ಯೋಜನೆ (ಜಿಲ್ಲಾವಲಯ) | | | | |
| | | ಜಿಲ್ಲೆಗಳಿಗೆ ನಿಗದಿಪಡಿಸಿದ ಭೌತಿಕ ಗುರಿಗಳಲ್ಲಿ ಸ್ಥಳೀಯ ತೆಂಗಿನ ಸಸಿಗಳ ಉತ್ಪಾದನೆ ಜೊತೆಗೆ ಕನಿಷ್ಟ ಶೇ.25 ರಷ್ಟು ಎಳನೀರು/ಗಿಡ್ಡ ಜಾತಿಯ ತಳಿಗಳ ತೆಂಗಿನ ಕಾಯಿಗಳನ್ನು (ಬೀಜದ) ಬಿತ್ತನೆ ಮಾಡಿ ತೆಂಗಿನ ಸಸಿಗಳನ್ನು ಉತ್ಪಾದಿಸಿ ರೈತರಿಗೆ | | - | - |

| | | | | | |
|---|---|---|---|---|---|
| | | | ಇಲಾಖೆ ನಿಗದಿಪಡಿಸಿದ ದರದಂತೆ ವಿತರಿಸಲಾಗುತ್ತಿದೆ. | | |
| 21 | ಜೇನು ಸಾಕಾಣಿಕೆ (ಜಿಲ್ಲಾ ವಲಯ) | | | | |
| | | ಆಸಕ್ತ ಫಲಾನುಭವಿಗಳಿಗೆ ಜೇನು ಪೆಟ್ಟಿಗೆ ಹಾಗೂ ಜೇನು ಕುಟುಂಬಗಳ ಖರೀದಿಗಾಗಿ ಸಹಾಯಧ | ಪ್ರತಿ ಜೇನು ಪೆಟ್ಟಿಗೆ ಹಾಗೂ ಕುಟುಂಬದ ಪ್ಯಾಕೇಜ್ ಗೆ ಶೇ.40 ರಂತೆ ಗರಿಷ್ಠ ರೂ.1800/- ಗಳಂತೆ (ಗರಿಷ್ಠ 4 ಪೆಟ್ಟಿಗೆ ಹಾಗೂ ಕುಟುಂಬಕ್ಕೆ) ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ರೈತರಿಗೆ ಶೇ.90 ರಂತೆ ಗರಿಷ್ಠ ರೂ.4050/ ಗಳಂತೆ ಸಹಾಯಧನ ನೀಡಲಾಗುತ್ತಿದೆ. | | |
| 22 | **ವಿಶೇಷ ಘಟಕ ಯೋಜನೆಹಾಗೂ ಗಿರಿಜನ ಉಪಯೋಜನೆ** | | | | |
| | i | ಪ್ರದೇಶ ವಿಸ್ತರಣೆ | | 90 | 90 |
| | ii | ಸೂಕ್ಷ್ಮ ನೀರಾವರಿ | 2018-19ನೇ ಸಾಲಿನ ಸೂಕ್ಷ್ಮ ನೀರಾವರಿ ಯೋಜನೆಯ ಮಾರ್ಗಸೂಚಿಯನ್ವಯ ತರಕಾರಿ ಮತ್ತು ಹೂವಿನ ಬೆಳೆಗಳಿಗೆ ತುಂತುರು ನೀರಾವರಿಅಳವಡಿಕೆಗೆ ಸಹಾಯಧನ ನೀಡಲಾಗುತ್ತಿದೆ. | 90 | 90 |
| | iii | ಪ್ಲಾಸ್ಟಿಕ್ ಕ್ರೇಟ್ಸ್ | ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ರೈತರಿಗೆ ತೋಟಗಾರಿಕೆ ಬೆಳೆಗಳ ಕೊಯ್ಲೋತ್ತರ ನಷ್ಟ ತಪ್ಪಿಸುವ ಸಲುವಾಗಿ ಪ್ಲಾಸ್ಟಿಕ್ ಕ್ರೇಟ್ಸ್‌ಗಳನ್ನು ಪ್ರತಿ ಫಲಾನುಭವಿಗೆ ಶೇ. 90 ರಂತೆ ಗರಿಷ್ಠ 25 ಸಂಖ್ಯೆಯಲ್ಲಿ ಪ್ರಸಕ್ತ ಸಾಲಿನಲ್ಲಿ ನಿಗದಿಪಡಿಸಿದಂತಹ ಇಲಾಖಾದರದಲ್ಲಿ ವಿತರಿಸಲಾಗುತ್ತಿದೆ. | 90 | 90 |

| | | | | | |
|---|---|---|---|---|---|
| | iv | ಸಣ್ಣ ರೈತರಿಗೆ ತರಕಾರಿ ಬೀಜ ವಿತರಣೆ. | ಘಟಕ ವೆಚ್ಚ ಗರಿಷ್ಟ ರೂ. 2000/- ಗಳಾಗಿದ್ದು ಶೇ.90 ರಂತೆ ಪ್ರತಿ ಫಲಾನುಭವಿಗೆ ರೂ.1800/ಎಕರೆ ಗಳವರೆಗೆ ಸಹಾಯಧನ ನೀಡಲಾಗುತ್ತಿದೆ. | 90 | 90 |

ತೋಟಗಾರಿಕೆ ಜಂಟಿ ನಿರ್ದೇಶಕ

(ಯೋಜನೆ)

ಅನುಬಂಧ-2

## ತೋಟಗಾರಿಕಾ ಇಲಾಖೆಯಿಂದ ಬೆಳಗಾವಿ ಜಿಲ್ಲೆಗೆ ವಿವಿಧ ಯೋಜನೆಗಳಡಿ ಕಳೆದ 3 ವರ್ಷಗಳಲ್ಲಿ (2015-16, 2016-17 & 2017-18) ಸರ್ಕಾರದಿಂದ ಬಿಡುಗಡೆಯಾದ ಅನುದಾನ, ತಾಲ್ಲೂಕುವಾರು, ವರ್ಷವಾರು ಲೆಕ್ಕಶೀರ್ಷಿಕೆವಾರು ವಿವರ

ಅ) ವರ್ಷ:2015-16

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಯೋಜನೆ | ಲೆಕ್ಕಶೀರ್ಷಿಕೆ | ಬಿಡುಗಡೆಯಾದ ಅನುದಾನ | | | | | | | | | |
|---|---|---|---|---|---|---|---|---|---|---|---|---|
| | | | ಅಥಣಿ | ಬೈಲಹೊಂಗಲ | ಬೆಳಗಾವಿ | ಚಿಕ್ಕೋಡಿ | ಗೋಕಾಕ | ಹುಕ್ಕೇರಿ | ಖಾನಾಪೂರ | ರಾಯಬಾಗ | ರಾಮದುರ್ಗ | ಸವದತ್ತಿ |
| I | ಕೇಂದ್ರ ನೆರವಿನ ಯೋಜನೆಗಳು | | | | | | | | | | | |
| 1 | ರಾಷ್ಟ್ರೀಯ ಎಣ್ಣೆಕಾಳು ಮತ್ತು ಎಣ್ಣೆ ತಾಳೆ ಅಭಿಯಾನ ಯೋಜನೆ | (2401-00-108-2-18) | | | | | 0 | | 0 | | | 0 |
| 2 | ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ | (2401-00-108-2-30) | 88.78 | 63.06 | 46.46 | 170.25 | 83.78 | 53.64 | 12.49 | 143.04 | 47.83 | 138 26 |
| 3 | ರಾಷ್ಟ್ರೀಯ ತೋಟಗಾರಿಕೆ ಮಿಷನ್ | (2401-00-119-4-06) | 155.37 | 23.24 | 105.87 | 26.55 | 17.46 | 11.93 | 28.44 | 6.71 | 20.41 | 23.10 |
| 4 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ | 2401-00-800-1-57 | 6.40 | 30.65 | 13.51 | 9.77 | 2.40 | 4.57 | 2.36 | 6.87 | 3.50 | 2.39 |
| | ಉಪ ಮೊತ್ತ | | 250.55 | 116.95 | 165.84 | 206.57 | 103.64 | 70.14 | 43.29 | 156.62 | 71.74 | 163.75 |
| II | ರಾಜ್ಯವಲಯ ಯೋಜನೆಗಳು | | | | | | | | | | | |
| 1 | ನಿರ್ದೇಶನ ಮತ್ತು ಆಡಳಿತ | (2401-00-001-2-01) | | | 0.05 | | | | 0.00 | | | 1.50 |
| 2 | ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ | 2401-00-001-2-10 | | | | | 0.00 | | 0.00 | | | 0.00 |
| 3 | ಸಮಗ್ರ ತೋಟಗಾರಿಕಾ ಅಭಿವೃದ್ಧಿ | (2401-00-111-0-08) | 113.89 | 34.91 | 106.52 | 82.85 | 31.35 | 5.86 | 12.62 | 29.33 | 44.17 | 78.21 |
| 4 | ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ ಮತ್ತು ನಿರ್ವಹಣೆ | (2401-00-119-4-05) | 0.27 | | | | 0.00 | | 0.00 | | | 0.00 |
| 5 | ಇಲಾಖಾ ಪ್ರಯೋಗಶಾಲೆಗಳ ಅಭಿವೃದ್ಧಿ | (2401-00-119-5-01) | | | 0.07 | 0.06 | 0.00 | 0.04 | 0.06 | | | 0.00 |
| 6 | ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ | (2401-00-119-5-02) | 0.27 | 0.55 | 1.39 | 0.49 | 0.40 | 0.45 | 0.60 | 0.40 | 0.89 | 0.63 |
| 7 | ತೋಟಗಾರಿಕೆ ಕಟ್ಟಡಗಳು | (2401-00-119-6-03) | | | 5.00 | | 0.00 | | 0.00 | | | 0.00 |
| 8 | ತೋಟಗಾರಿಕೆ ಉದ್ಯಾನವನಗಳು ಮತ್ತು ತೋಟಗಳು | (2406-02-112-0-17) | | | | | 0.00 | | 0.00 | | | 0.00 |
| 9 | ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ | (2851-00-200-0-01) | | 1.00 | 2.58 | 0.18 | 0.00 | | 0.00 | | | 0.00 |
| 10 | ಕೃಷಿಭಾಗ್ಯ ಯೋಜನೆ | 2401-00-800-2-48 | | 290.62 | | | | | | 106.70 | | 155.78 |
| | ಉಪ ಮೊತ್ತ | | 114.43 | 327.08 | 115.60 | 83.58 | 31.75 | 6.35 | 13.28 | 136.43 | 45.06 | 236.12 |
| III | ಜಿಲ್ಲಾವಲಯ ಯೋಜನೆಗಳು | | | | | | | | | | | |
| 1 | ರಾಷ್ಟ್ರೀಯ ಎಣ್ಣೆಕಾಳು ಮತ್ತು ಎಣ್ಣೆ ತಾಳೆ ಅಭಿಯಾನ ಯೋಜನೆ | (2435-00-101-0-02) | | | 10.12 | | 0.00 | | 0.00 | | | 0.00 |
| 2 | ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿ ನೀರಾವರಿ | (2435-00-101-0-28) | 5.46 | 5.45 | 5.41 | 6.20 | 0.00 | 5.39 | 2.45 | 5.99 | 5.46 | 0.00 |
| 3 | ತೋಟಗಾರಿಕೆ ಕಟ್ಟಡಗಳು | (2435-00-101-0-32) | | | 2.00 | 2.00 | 0.00 | | 0.00 | | | 0.00 |
| 4 | ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ | (2435-00-101-0-35) | 5.85 | | | 0.40 | 0.00 | 0.25 | 0.00 | | | 1.00 |
| 5 | ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆಗಾಗಿ ಯೋಜನೆ | (2435-00-101-0-36) | | | | | 0.00 | 1.67 | 0.00 | | | 0.04 |
| 6 | ಪ್ರಚಾರ ಮತ್ತು ಸಾಹಿತ್ಯ | (2435-00-101-0-38) | | | 2.10 | | 0.00 | | 0.00 | | | 0.00 |
| 7 | ಶೀಥಲ ಗೃಹಗಳಿಗೆ ಸಹಾಯಧನ ಯೋಜನೆ | (2435-00-101-0-39 ) | | | 2.53 | | 0.00 | | 0.00 | | | 0.00 |
| 8 | ಜೇನು ಸಾಕಾಣಿಕೆ | (2851-00-107-0-33) | | | 3.00 | | 0.00 | | 0.00 | | | 0.00 |
| 9 | ರೈತರಿಗೆ ಸಹಾಯ | (2435-00-101-0-62) | 0.28 | 0.20 | 5.13 | 0.20 | 0.28 | 0.12 | 0.32 | 0.26 | 0.28 | 0.12 |
| 10 | ರೈತರಿಗೆ ತರಬೇತಿ | (2435-00-101-0-64) | 0.10 | 0.09 | 0.09 | 0.17 | 0.10 | 0.10 | 0.10 | 0.09 | 0.09 | 0.09 |
| | ಉಪ ಮೊತ್ತ | | 11.69 | 5.74 | 30.38 | 10.97 | 0.38 | 7.53 | 2.87 | 6.34 | 5.83 | 1.25 |
| | ಒಟ್ಟಾರೆ ಮೊತ್ತ (I+II+III) | | 376.67 | 449.77 | 311.83 | 301.12 | 135.77 | 84.02 | 59.44 | 299.39 | 122.63 | 401 11 |

ಆ) ವರ್ಷ:2016-17

ರೂ.ಲಕ್ಷಗಳಲ್ಲಿ

| ಕ್ರ.ಸಂ | ಯೋಜನೆ | ಲೆಕ್ಕಶೀರ್ಷಿಕೆ | ಒದಗಿಸಿದ /ಬಿಡುಗಡೆಯಾದ ಅನುದಾನ | | | | | | | | | |
|---|---|---|---|---|---|---|---|---|---|---|---|---|
| | | | ಅಥಣಿ | ಬೈಲಹೊಂಗಲ | ಬೆಳಗಾವಿ | ಚಿಕ್ಕೋಡಿ | ಗೋಕಾಕ | ಹುಕ್ಕೇರಿ | ಖಾನಾಪೂರ | ರಾಯಬಾಗ | ರಾಮದುರ್ಗ | ಸವದತ್ತಿ |
| I | ಕೇಂದ್ರ ನೆರವಿನ ಯೋಜನೆಗಳು | | | | | | | | | | | |
| 1 | ರಾಷ್ಟ್ರೀಯ ಎಣ್ಣೆಕಾಳು ಮತ್ತು ಎಣ್ಣೆ ತಾಳೆ ಅಭಿಯಾನ ಯೋಜನೆ | (2401-00-108-2-18) | | | | | 0 | 48.97 | 0 | | | 0 |
| 2 | ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಹನಿ ನೀರಾವರಿ) | (2401-00-108-2-30) | 126.28 | 44.08 | 20.24 | 164.50 | 74.13 | | 33.92 | 122.99 | 32.91 | 75.79 |
| 3 | ರಾಷ್ಟ್ರೀಯ ತೋಟಗಾರಿಕೆ ಮಿಷನ್ | (2401-00-119-4-06) | 183.87 | 11.49 | 107.48 | 26.59 | 15.73 | 15.78 | 107.50 | 26.56 | 19.81 | 20.58 |
| 4 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ | 2401-00-800-1-57 | 23.92 | 13.71 | 18.59 | 82.00 | 13.06 | 12.91 | 6.93 | 16.18 | 13.59 | 57.22 |
| | ಉಪ ಮೊತ್ತ | | 334.07 | 69.28 | 146.30 | 273.09 | 102.92 | 77.66 | 148.35 | 165.73 | 66.31 | 153.59 |
| II | ರಾಜ್ಯವಲಯ ಯೋಜನೆಗಳು | | | | | | | | | | | |
| 1 | ನಿರ್ದೇಶನ ಮತ್ತು ಆಡಳಿತ | (2401-00-001-2-01) | 0.48 | | 0.46 | | | 0.36 | 0.48 | | | 1.50 |
| 2 | ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ | 2401-00-001-2-10 | | | 9.56 | | 0.00 | | 0.00 | 19.78 | 0.94 | 0.00 |
| 3 | ಸಮಗ್ರ ತೋಟಗಾರಿಕಾ ಅಭಿವೃದ್ಧಿ | (2401-00-111-0-08) | 406.84 | 13.63 | 94.83 | 19.60 | 0.00 | 12.07 | 50.65 | 14.27 | 25.11 | 10.14 |
| 4 | ಕೃಷಿ ಕ್ಷೇತ್ರ ಮತ್ತು ಸಸ್ಯಪಾಟಿಕೆಗಳ ಅಭಿವೃದ್ಧಿ ಮತ್ತು ನಿರ್ವಹಣೆ | (2401-00-119-4-05) | | | | | 0.00 | | 0.00 | | | 0.00 |
| 5 | ಜಿಲ್ಲಾ ಪ್ರಯೋಗಶಾಲೆಗಳ ಅಭಿವೃದ್ಧಿ | (2401-00-119-5-01) | 0.08 | | 0.06 | 0.06 | 0.00 | 0.06 | 0.06 | | | 0.00 |
| 6 | ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ | (2401-00-119-5-02) | 0.57 | 0.59 | 0.62 | 0.59 | 0.61 | 0.68 | 0.60 | 0.35 | 1.14 | 1.72 |
| 7 | ತೋಟಗಾರಿಕೆ ಕಟ್ಟಡಗಳು | (2401-00-119-6-03) | | | | | 0.00 | | 0.00 | | | 0.00 |
| 8 | ತೋಟಗಾರಿಕೆ ಉದ್ಯಾನವನಗಳು ಮತ್ತು ತೋಟಗಳು | (2406-02-112-0-17) | | | 1.80 | | 0.00 | | 0.00 | | | 0.00 |
| 9 | ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ | (2851-00-200-0-01) | | 1.00 | | | 0.00 | | 1.00 | | | 0.00 |
| 10 | ಕೃಷಿಭಾಗ್ಯ ಯೋಜನೆ | 2401-00-800-2-48 | | 44.82 | | | | | | 55.28 | | |
| | ಉಪ ಮೊತ್ತ | | 407.95 | 60.04 | 107.33 | 20.25 | 0.61 | 13.17 | 52.79 | 89.68 | 27.19 | 13.36 |
| III | ಜಿಲ್ಲಾವಲಯ ಯೋಜನೆಗಳು | | | | | | | | | | | |
| 1 | ರಾಷ್ಟ್ರೀಯ ಎಣ್ಣೆಕಾಳು ಮತ್ತು ಎಣ್ಣೆ ತಾಳೆ ಅಭಿಯಾನ ಯೋಜನೆ (ಜಿಲ್ಲಾವಲಯ) | (2435-00-101-0-02) | | | 4.00 | | 0.00 | | 0.20 | | | 0.00 |
| 2 | D-02 ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿ ನೀರಾವರಿ | (2435-00-101-0-28) | 5.35 | 5.45 | 5.51 | 5.35 | 5.25 | 5.45 | 5.50 | 5.08 | 5.41 | 5.43 |
| 3 | ತೋಟಗಾರಿಕೆ ಕಟ್ಟಡಗಳು | (2435-00-101-0-32) | | | 4.00 | | 0.00 | | 12.00 | | | 0.00 |
| 4 | ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ | (2435-00-101-0-35) | 2.50 | | | | 0.00 | 0.50 | 0.00 | | | 1.00 |
| 5 | ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆಗಾಗಿ ಯೋಜನೆ | (2435-00-101-0-36) | | | | | 0.00 | 1.00 | 0.00 | | | 1.72 |
| 6 | ಪ್ರಚಾರ ಮತ್ತು ಸಾಹಿತ್ಯ | (2435-00-101-0-38) | | | 2.35 | | 0.00 | | 0.00 | | | 0.00 |

| | | | | | | | | | | | | |
|---|---|---|---|---|---|---|---|---|---|---|---|---|
| 7 | [illegible] | (2435-00-101-0-39) | | | 2.49 | | 0.00 | | 0.00 | | | [illegible] |
| 8 | [illegible] | (2851-00-107-0-33) | | | 3.00 | | 0.00 | | 0.00 | | | 0.00 |
| 9 | ರೈತರಿಗೆ [illegible] | (2435-00-101-0-62) | 0.33 | [illegible] | 1.16 | 0.32 | 0.32 | 0.00 | 0.32 | 0.12 | 0.24 | 0.32 |
| 10 | ರೈತರಿಗೆ [illegible] | (2435-00-101-0-64) | 0.09 | 0.08 | 0.08 | 0.11 | 0.08 | 0.06 | 0.10 | 0.10 | 0.08 | 0.07 |
| | **ಉಪ ಮೊತ್ತ** | | **8.27** | **5.73** | **22.59** | **5.78** | **5.65** | **7.01** | **18.12** | **5.30** | **5.73** | **8.54** |
| | **ಒಟ್ಟಾರೆ ಮೊತ್ತ (I+II+III)** | | **750.29** | **135.05** | **276.22** | **799.12** | **109.18** | **97.84** | **719.26** | **260.71** | **99.23** | **175.49** |

ಇ) ವರ್ಷ:2017-18

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಯೋಜನೆ | ಲೆಕ್ಕಶೀರ್ಷಿಕೆ | ಒದಗಿಸಿದ /ಬಿಡುಗಡೆಯಾದ ಅನುದಾನ | | | | | | | | | |
|---|---|---|---|---|---|---|---|---|---|---|---|---|
| | | | ಅಥಣಿ | ಬೈಲಹೊಂಗಲ | ಬೆಳಗಾವಿ | ಚಿಕ್ಕೋಡಿ | ಗೋಕಾಕ | ಹುಕ್ಕೇರಿ | ಖಾನಾಪೂರ | ರಾಯಬಾಗ | ರಾಮದುರ್ಗ | ಸವದತ್ತಿ |
| I | ಕೇಂದ್ರ ನೆರವಿನ ಯೋಜನೆಗಳು | | | | | | | | | | | |
| 1 | ರಾಷ್ಟ್ರೀಯ ವಿಕೋಪಗಳು ಮತ್ತು ವಿಕೋಪ ತಾಳಿ ಅಭಿಯಾನ ಯೋಜನೆ | (2401-00-108-2-18) | | | | | 0 | | 0 | | | 0 |
| 2 | ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಹನಿ ನೀರಾವರಿ) | (2401-00-108-2-30) | 208.31 | 125.61 | 50.38 | 177.05 | 89.00 | 97.85 | 103.66 | 292.64 | 69.68 | 134.32 |
| 3 | ರಾಷ್ಟ್ರೀಯ ತೋಟಗಾರಿಕೆ ಮಿಷನ್ | (2401-00-119-4-06) | 264.66 | 9.12 | 127.70 | 24.97 | 17.75 | 14.85 | 116.62 | 19.37 | 26.06 | 17.55 |
| 4 | ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ | 2401-00-800-1-57 | 2.40 | 42.22 | 2.64 | 1.20 | 1.36 | 3.80 | 4.00 | 0.80 | 2.48 | 1.36 |
| | ಉಪ ಮೊತ್ತ | | 475.37 | 176.95 | 180.72 | 203.22 | 108.11 | 116.50 | 224.28 | 312.81 | 98.22 | 153.23 |
| II | ರಾಜ್ಯವಲಯ ಯೋಜನೆಗಳು | | | | | | | | | | | |
| 1 | ನಿರ್ದೇಶನ ಮತ್ತು ಆಡಳಿತ | (2401-00-001-2-01) | 2.63 | | 2.54 | | | 0.36 | 2.78 | | | 0.91 |
| 2 | ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ | 2401-00-001-2-10 | 9.37 | | 7.83 | 7.56 | 0.00 | 3.13 | 6.29 | 3.33 | 10.27 | 5.74 |
| 3 | ಸಮಗ್ರ ತೋಟಗಾರಿಕಾ ಅಭಿವೃದ್ಧಿ | (2401-00-111-0-08) | 209.81 | 21.82 | 60.73 | 25.00 | 19.34 | 26.50 | 74.88 | 15.04 | 38.69 | 39.17 |
| 4 | ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ ಮತ್ತು ನಿರ್ವಹಣೆ | (2401-00-119-4-05) | | | | | 0.00 | | 0.00 | | | 0.00 |
| 5 | ಇಲಾಖಾ ಪ್ರಯೋಗಶಾಲೆಗಳ ಅಭಿವೃದ್ಧಿ | (2401-00-119-5-01) | 0.06 | | 0.06 | | 0.00 | 0.06 | 0.76 | | | 0.00 |
| 6 | ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ | (2401-00-119-5-02) | 0.45 | 0.33 | 0.80 | 0.53 | 0.82 | 0.55 | 0.18 | 0.59 | 0.91 | 0.66 |
| 7 | ತೋಟಗಾರಿಕೆ ಕಟ್ಟಡಗಳು | (2401-00-119-6-03) | | | | | 0.00 | | 0.00 | | | 0.00 |
| 8 | ತೋಟಗಾರಿಕೆ ಉದ್ಯಾನವನಗಳು ಮತ್ತು ತೋಟಗಳು | (2406-02-112-0-17) | | | | | 0.00 | | 0.00 | | | 0.00 |
| 9 | ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ | (2851-00-200-0-01) | | | 3.50 | | 0.00 | | 1.00 | | | 0.00 |
| 10 | ಕೃಷಿಭಾಗ್ಯ ಯೋಜನೆ | 2401-00-800-2-48 | 75.30 | 106.67 | 13.34 | 53.71 | | 18.49 | 10.34 | 199.20 | 40.53 | 52.48 |
| | ಉಪ ಮೊತ್ತ | | 297.62 | 128.82 | 88.80 | 86.80 | 20.16 | 49.09 | 96.23 | 218.16 | 90.40 | 98.96 |
| III | ಜಿಲ್ಲಾವಲಯ ಯೋಜನೆಗಳು | | | | | | | | | | | |
| 1 | ರಾಷ್ಟ್ರೀಯ ವಿಕೋಪಗಳು ಮತ್ತು ವಿಕೋಪ ತಾಳಿ ಅಭಿಯಾನ ಯೋಜನೆ (ಜಿಲ್ಲಾವಲಯ) | (2435-00-101-0-02) | | | 4.00 | | 0.00 | | 0.00 | | | 0.00 |
| 2 | ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿ ನೀರಾವರಿ | (2435-00-101-0-28) | 5.09 | | 5.61 | 5.56 | 5.50 | 5.10 | 5.10 | 6.69 | 5.72 | 5.71 |

| | | | | | | | | | | | | |
|---|---|---|---|---|---|---|---|---|---|---|---|---|
| 3 | [illegible] | (2435-00-101-0-32) | | | 5.00 | | 0.00 | 5.00 | 3.00 | | | 4.00 |
| 4 | [illegible] | (2435-00-101-0-35) | 6.00 | | | | 0.00 | 0.50 | 0.00 | | | 4 |
| 5 | [illegible] | (2435-00-101-0-36) | | | | | 0.00 | 1.36 | 0.00 | | | 1.80 |
| 6 | [illegible] | (2435-00-101-0-38) | | | 2.50 | | 0.00 | | 0.00 | | | 0.00 |
| 7 | [illegible] | (2435-00-101-0-39) | | | 2.50 | | 0.00 | | 0.00 | | | 0.00 |
| 8 | [illegible] | (2851-00-107-0-33) | | | 3.00 | | 0.00 | | 0.00 | | | 0.00 |
| 9 | [illegible] | (2435-00-101-0-62) | 0.40 | 0.20 | 0.40 | 0.40 | 0.25 | 0.20 | 0.40 | 0.20 | 0.40 | 0.40 |
| 10 | [illegible] | (2435-00-101-0-64) | 0.10 | 0.09 | 0.10 | 0.10 | 0.10 | 0.10 | 0.10 | 0.08 | 0.08 | 0.09 |
| | **ಉಪ ಮೊತ್ತ** | | **11.59** | **0.29** | **23.11** | **6.06** | **5.85** | **12.26** | **8.60** | **6.97** | **6.20** | **16.30** |
| | **ಒಟ್ಟಾರೆ ಮೊತ್ತ (I+II+III)** | | **784.58** | **306.06** | **292.63** | **296.08** | **134.12** | **177.85** | **329.11** | **537.93** | **194.82** | **268.49** |

**ತೋಟಗಾರಿಕೆ ಜಂಟಿ ನಿರ್ದೇಶಕರು**

**(ಯೋಜನೆ)**

LC-742

# ಅನುಬಂಧ-3

## ಫಲಾನುಭವಿಗಳ ಆಯ್ಕೆಗೆ ಇರುವ ಮಾನದಂಡಗಳು, ಆಯ್ಕೆ ಸಮಿತಿ, ಆಯ್ಕೆ ಪಟ್ಟಿಯನ್ನು ಅಂತಿಮಗೊಳಿಸುವಿಕೆ ವಿವರಗಳು

### ಸಾಮಾನ್ಯ ಅರ್ಹತೆಗಳು

1. ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಆಯ್ಕೆಗೆ ಪರಿಗಣಿಸಿದ ನಂತರ ದೊಡ್ಡ ರೈತರನ್ನು ಸಹಾಯಧನಕ್ಕಾಗಿ ಪರಿಗಣಿಸುವುದು.
2. ಈ ಹಿಂದೆ ಇಲಾಖೆಯಿಂದ ಯಾವುದೇ ಸಹಾಯಧನ ಪಡೆಯದ ಹೊಸ ಫಲಾನುಭವಿಗಳಿಗೆ ಆದ್ಯತೆ ನೀಡುವುದು.
3. ಈ ಹಿಂದೆ ಇಲಾಖೆಯಿಂದ ಸಹಾಯಧನ ಪಡೆದ ಫಲಾನುಭವಿಗಳು ಕಾರ್ಯಕ್ರಮದ ಸಮರ್ಪಕ / ಸದ್ಬಳಕೆ ಮಾಡದಿದ್ದಲ್ಲಿ ಅಂತಹ ಫಲಾನುಭವಿಗಳನ್ನು ಹೊಸ ಘಟಕ/ಕಾರ್ಯಕ್ರಮಗಳಿಗೆ ಅರ್ಜಿ ಸಲ್ಲಿಸಿದ್ದಲ್ಲಿ ಆಯ್ಕೆಗೆ ಪರಿಗಣಿಸಬಾರದು.
4. ಯಾವುದೇ ಫಲಾನುಭವಿಯು ಹಿಂದಿನ ಮೂರು ವರ್ಷಗಳ ಅವಧಿಯಲ್ಲಿ ಸೌಲಭ್ಯವನ್ನು ಪಡೆದಿದ್ದರೆ ಈ ಸಾಲಿನಲ್ಲಿ ಅಂತಹ ಫಲಾನುಭವಿಯನ್ನು ಪರಿಗಣಿಸಬಾರದು.
5. ಪೂರಕ ಘಟಕಗಳು ಒಂದೇ ವರ್ಷದಲ್ಲಿ ಒದಗಿಸಲು ಸಾಧ್ಯವಾಗದಿದ್ದಲ್ಲಿ ಅಂತಹ ಘಟಕಗಳನ್ನು ಮುಂದಿನ ವರ್ಷದಲ್ಲಿ ಒದಗಿಸಲು ಪರಿಗಣಿಸಬಹುದು.
6. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಪ್ರತಿಫಲಾನುಭವಿಗೆ 2 ಕಿರು ಘಟಕಗಳು ಅಥವಾ ಒಂದು ಪ್ರಧಾನ ಘಟಕವನ್ನು ನೀಡಬಹುದಾಗಿದೆ.
7. ಯಾವುದೇ ಸೌಲಭ್ಯಕ್ಕೆ ನಿಗಧಿಗಿಂತ ಅಧಿಕ ಅರ್ಜಿಗಳು ಬಂದಲ್ಲಿ ಅರ್ಹ ಇದ್ದ ಅರ್ಜಿಗಳನ್ನು ಮಾತ್ರ ಪರಿಗಣಿಸಿ ಜಿಲ್ಲಾಮಟ್ಟದಲ್ಲಿ ತೋಟಗಾರಿಕೆ ಉಪನಿರ್ದೇಶಕರು ಇವರ ಅಧ್ಯಕ್ಷತೆಯಲ್ಲಿ ಆಯಾ ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು / ಸಹಾಯಕ ತೋಟಗಾರಿಕೆ ನಿರ್ದೇಶಕರುಗಳನ್ನು ಒಳಗೊಂಡಂತೆ ಸಮಿತಿ ರಚಿಸಿ, ವಿವಿಧ ಯೋಜನೆಗಳಡಿ ಅಂತಿಮ ಫಲಾನುಭವಿ ಪಟ್ಟಿಯನ್ನು ತಯಾರಿಸುವುದು.
8. ತಾಲ್ಲೂಕು ಮಟ್ಟದಲ್ಲಿ ಸ್ವೀಕೃತವಾದ ಅರ್ಜಿಗಳನ್ನು ಮೀಸಲಾತಿವಾರು ನಿಗಧಿಪಡಿಸಲಾದ ಗುರಿಯನ್ವಯ ಪರಿಶಿಷ್ಟಜಾತಿ/ ಪರಿಶಿಷ್ಟಪಂಗಡ, ಮಹಿಳೆಯರು, ವಿಕಲಚೇತನರು, ಅಲ್ಪಸಂಖ್ಯಾತರು, ಸಣ್ಣ, ಅತಿಸಣ್ಣರೈತರುವರ್ಗವಾರು ವಿಂಗಡಿಸುವುದು.
9. ಮೀಸಲಾತಿವಾರು ನಿಗಧಿಪಡಿಸಲಾದ ಗುರಿಯನ್ವಯ ನಿಗಧಿತ ಸಂಖ್ಯೆಯಲ್ಲಿ ಅರ್ಜಿಗಳು ಸ್ವೀಕೃತವಾಗದಿದ್ದಲ್ಲಿ ಇನ್ನೂ ಹೆಚ್ಚಿನ ಪ್ರಚಾರ ನೀಡಿ ಗುರಿ ಸಾಧಿಸಲು ಪ್ರಯತ್ನಿಸುವುದು.

10. ತೋಟಗಾರಿಕೆ ಬೆಳೆಗಳ ಸಮಗ್ರ ಕೀಟ ನಿರ್ವಹಣೆ, ಆಲೂಗೆಡ್ಡೆ ಪ್ರಾತ್ಯಕ್ಷತೆ ಮುಂತಾದ ಅತೀ ಕಡಿಮೆ ಮೌಲ್ಯದ ಕಾರ್ಯಕ್ರಮಗಳಿಗೆ ಹೊಸ ಫಲಾನುಭವಿಗಳನ್ನು ಪರಿಗಣಿಸಿದ ನಂತರ ಈ ಹಿಂದೆ ಸದರಿ ಕಾರ್ಯಕ್ರಮದಡಿ ಸಹಾಯಧನ ಪಡೆದ ಫಲಾನುಭವಿಗಳನ್ನು ಪರಿಗಣಿಸಬಹುದಾಗಿದೆ.

11. ಪ್ರದೇಶ ವಿಸ್ತರಣೆ, ಹನಿ ನೀರಾವರಿ, ಸಂರಕ್ಷಿತ ಬೇಸಾಯ, ಪುನ:ಶ್ಚೇತನ, ಸಾವಯವ ಪದ್ಧತಿ ಅಳವಡಿಕೆ, ಬೀಜೋತ್ಪಾದನೆ ಕಾರ್ಯಕ್ರಮಗಳಿಗೆ ಈ ಮೊದಲು ಸೌಲಭ್ಯ ಪಡೆದಿದ್ದಲ್ಲಿ ಆಯಾ ಯೋಜನೆಗಳ ಮಾರ್ಗಸೂಚಿಗಳನ್ವಯ ಗರಿಷ್ಟ ಪ್ರಮಾಣದ ಸೌಲಭ್ಯವನ್ನು ಪಡೆಯದೆ ಇರುವ ರೈತರು ಮತ್ತೆ ಸದರಿ ಕಾರ್ಯಕ್ರಮಗಳಿಗೆ ಸಹಾಯಧನ ಕೋರಿ ಪುನ: ಅರ್ಜಿ ಸಲ್ಲಿಸಿದ್ದಲ್ಲಿ ಅಂತಹ ಸಂದರ್ಭದಲ್ಲಿ ಸದರಿ ಕಾರ್ಯಕ್ರಮಗಳಡಿ ಯಾವುದೇ ಸಹಾಯಧನ ಪಡೆಯದ ಫಲಾನುಭವಿಗಳನ್ನು ಮೊದಲು ಪರಿಗಣಿಸುವುದು.

12. ಒಬ್ಬ ಫಲಾನುಭವಿ ಒಂದಕ್ಕಿಂತ ಹೆಚ್ಚು ಸೌಲಭ್ಯಗಳಿಗೆ ಅರ್ಜಿಸಲ್ಲಿ ಸಿದ್ದು, ಅವನು ಸಲ್ಲಿಸಿದ ಸೌಲಭ್ಯಗಳಿಗೆ ಸಾಕಷ್ಟು ಸಂಖ್ಯೆಯ ಇತರೆ ಫಲಾನುಭವಿಗಳು ಸಿಗದೆ ಇದ್ದಲ್ಲಿ ಅಂತಹ ಸಂದರ್ಭದಲ್ಲಿ ಸದರಿ ಫಲಾನುಭವಿಗಳಿಗೆ ಎರಡಕ್ಕಿಂತ ಹೆಚ್ಚಿನ ಕಾರ್ಯಕ್ರಮಗಳಿಗೆ ಸಹಾಯಧನವನ್ನು ನೀಡಬಹುದಾಗಿದೆ.

ತೋಟಗಾರಿಕೆ ಜಂಟಿ ನಿರ್ದೇಶಕರು

(ಯೋಜನೆ)